**D**

**CCE PR**
**UNREVISED**

**ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿ, ಮಲ್ಲೇಶ್ವರಂ, ಬೆಂಗಳೂರು – 560 003**

**KARNATAKA SECONDARY EDUCATION EXAMINATION BOARD, MALLESWARAM, BANGALORE – 560 003**

**ಎಸ್.ಎಸ್.ಎಲ್.ಸಿ. ಪರೀಕ್ಷೆ, ಜೂನ್, 2019**

**S.S.L.C. EXAMINATION, JUNE, 2019**

**ಮಾದರಿ ಉತ್ತರಗಳು**

**MODEL ANSWERS**

ದಿನಾಂಕ : 25. 06. 2019 ] **ಸಂಕೇತ ಸಂಖ್ಯೆ : 01-K**

Date : 25. 06. 2019 ] **CODE NO. : 01-K**

**ವಿಷಯ : ಪ್ರಥಮ ಭಾಷೆ — ಕನ್ನಡ**

**Subject : First Language — KANNADA**

**(ಹಳೆ ಪಠ್ಯಕ್ರಮ / Old Syllabus)**

**(ಪುನರಾವರ್ತಿತ ಖಾಸಗಿ ಅಭ್ಯರ್ಥಿ / Private Repeater)**

**[ ಗರಿಷ್ಠ ಅಂಕಗಳು : 125**

**[ Max. Marks : 125**

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| | **ವಿಭಾಗ – 'ಎ'** | |
| | **(ಪಠ್ಯಗಳ ಅಧ್ಯಯನ – ಗದ್ಯ, ಪದ್ಯ, ಪೋಷಕ ಅಧ್ಯಯನ)** | |
| | **ಒಂದೊಂದು ವಾಕ್ಯದಲ್ಲಿ ಉತ್ತರ ಬರೆಯುವುದು.** | |
| | **(ವಾಕ್ಯ ರೂಪದಲ್ಲಿರುವ ಪ್ರತಿ ಸರಿಯುತ್ತರಕ್ಕೆ ಒಂದು ಅಂಕ) :** | 16 × 1 = 16 |
| 1. | ಶ್ರೀರಾಮನ ತಂದೆಯ ಹೆಸರೇನು ? | |
| | ***ಉತ್ತರ :*** | |
| | ಶ್ರೀರಾಮನ ತಂದೆಯ ಹೆಸರು ದಶರಥ. | |
| 2. | ವಿ.ಕೃ. ಗೋಕಾಕ್‌ರವರು ಜೀವನದಲ್ಲಿ ಯಾವುದಕ್ಕೆ ಹೆಚ್ಚಿನ ಸ್ಥಾನವಿದೆ ಎಂದು ಹೇಳಿದ್ದಾರೆ ? | |
| | ***ಉತ್ತರ :*** | |
| | ವಿ.ಕೃ. ಗೋಕಾಕ್‌ರವರು ಜೀವನದಲ್ಲಿ ಅನ್ಯರ ದೃಷ್ಟಿಕೋನಕ್ಕೂ, ಅನ್ಯರ ಜೀವನದಲ್ಲಿ ನಮ್ಮ ದೃಷ್ಟಿಕೋನಕ್ಕೂ ಹೆಚ್ಚಿನ ಸ್ಥಾನವಿದೆ ಎಂದು ಹೇಳಿದ್ದಾರೆ. | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| 3. | ಗೃಹಸ್ಥಾಶ್ರಮವು ಧನ್ಯ ಎಂದು ಹೇಳಿದವರು ಯಾರು ?<br>***ಉತ್ತರ :***<br>ಗೃಹಸ್ಥಾಶ್ರಮವು ಧನ್ಯವೆಂದು ಹೇಳಿದವರು ಕಾಳಿದಾಸನು ಕಲ್ಪಿಸಿದ ಋಷಿ ಅರಣ್ಯಕರು. | |
| 4. | ರಾಯನು ವಿಧಿಸಿದ ಕಟ್ಟಳಯನ್ನು ಮೀರಿದರೆ ಆಗುವ ಪರಿಣಾಮವೇನು ?<br>***ಉತ್ತರ :***<br>ರಾಯನು ವಿಧಿಸಿದ ಕಟ್ಟಳೆಯನ್ನು ಮೀರಿದರೆ ರಾಜದ್ರೋಹಿ ಆಗುತ್ತಾನೆ. | |
| 5. | ವಿಶ್ವೇಶ್ವರಯ್ಯ ಅವರ ಹುಟ್ಟುಹಬ್ಬದ ನೆನಪಿಗಾಗಿ ಯಾವ ದಿನಾಚರಣೆಯನ್ನು ಮಾಡಲಾಗುತ್ತಿದೆ ?<br>***ಉತ್ತರ :***<br>ವಿಶ್ವೇಶ್ವರಯ್ಯ ಅವರ ಹುಟ್ಟುಹಬ್ಬದ ನೆನಪಿಗಾಗಿ "ಎಂಜಿನಿಯರ್ಸ್ ದಿನ" ಎಂದು ಆಚರಣೆಯನ್ನು ಮಾಡಲಾಗುತ್ತಿದೆ. | |
| 6. | 'ಮಲೆಗಳಲ್ಲಿ ಮದುಮಗಳು' ಯಾರು ಬರೆದ ಕಾದಂಬರಿ ?<br>***ಉತ್ತರ :***<br>'ಮಲೆಗಳಲ್ಲಿ ಮದುಮಗಳು' ಕವಿ ಕುವೆಂಪುರವರು ಬರೆದ ಕಾದಂಬರಿ. | |
| 7. | ಘಟಸಂಭೂತ ಯಾರು ?<br>***ಉತ್ತರ :***<br>ಘಟಸಂಭೂತ ಗುರು ದ್ರೋಣಾಚಾರ್ಯರು. | |
| 8. | ಹಕ್ಕಿಯ ಕಣ್ಣುಗಳು ಯಾವುವು ?<br>***ಉತ್ತರ :***<br>ಹಕ್ಕಿಯ ಕಣ್ಣುಗಳು ಸೂರ್ಯ–ಚಂದ್ರರು. | |
| 9. | ಹಕ್ಕಿಯು ಯಾರ ನೆತ್ತಿಯನ್ನು ಕುಕ್ಕಿದೆ ?<br>***ಉತ್ತರ :***<br>ಹಕ್ಕಿಯು ಸಾರ್ವಭೌಮರ ನೆತ್ತಿಯನ್ನು ಕುಕ್ಕಿದೆ. | |
| 10. | ವಚನಕಾರರು ಯಾವುದನ್ನು ಮರವನೇರಿದ ಮರ್ಕಟ ಎಂದಿದ್ದಾರೆ ?<br>***ಉತ್ತರ :***<br>ವಚನಕಾರರು ಚಂಚಲ ಮನಸ್ಸನ್ನು ಮರವನೇರಿದ ಮರ್ಕಟ ಎಂದಿದ್ದಾರೆ. | |
| 11. | ಯಾವ ಎಚ್ಚರದಲ್ಲಿ ಬದುಕಬೇಕೆಂದು ಕವಿ ಜಿ.ಎಸ್. ಶಿವರುದ್ರಪ್ಪನವರು ಅಭಿಪ್ರಾಯ ಪಡುತ್ತಾರೆ ?<br>***ಉತ್ತರ :***<br>ಮತಗಳೆಲ್ಲವೂ ಪಥಗಳು ಎನ್ನುವ ಹೊಸ ಎಚ್ಚರದಲ್ಲಿ ಬದುಕಬೇಕೆಂದು ಕವಿ ಜಿ.ಎಸ್. ಶಿವರುದ್ರಪ್ಪನವರು ಅಭಿಪ್ರಾಯ ಪಡುತ್ತಾರೆ. | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| 12. | ಅಶ್ವಿನಿ ದೇವತೆಗಳ ವರಬಲದಿಂದ ಜನಿಸಿದವರು ಯಾರು ಯಾರು ?<br>***ಉತ್ತರ :***<br>ಅಶ್ವಿನಿ ದೇವತೆಗಳ ವರಬಲದಿಂದ ಜನಿಸಿದವರು ನಕುಲ ಮತ್ತು ಸಹದೇವ. | |
| 13. | ಅಳುವ ಕಂದನನ್ನು ನಗಿಸಲು ಕವಯಿತ್ರಿ ಇಂದುಮತಿ ಲಮಾಣಿಯವರು ಏನಾಗ ಬಯಸಿದ್ದಾರೆ ?<br>***ಉತ್ತರ :***<br>ಅಳುವ ಕಂದನನ್ನು ನಗಿಸಲು ಕವಯಿತ್ರಿ ಇಂದುಮತಿ ಲಮಾಣಿಯವರು ಅಮ್ಮನ ಕಂಠದ ಜೋಗುಳವಾಗಲು ಬಯಸಿದ್ದಾರೆ. | |
| 14. | ಅಜ್ಞಾನ ತೊಲಗಿಸಲು ಕವಯಿತ್ರಿ ಇಂದುಮತಿ ಲಮಾಣಿಯವರು ಏನಾಗ ಬಯಸಿದ್ದಾರೆ ?<br>***ಉತ್ತರ :***<br>ಅಜ್ಞಾನ ತೊಲಗಿಸಲು ಕವಯಿತ್ರಿ ಇಂದುಮತಿ ಲಮಾಣಿಯವರು ವಾಗ್ದೇವಿಯ ಕೈಯಲ್ಲಿಯ ಗ್ರಂಥವಾಗಬೇಕೆಂದು ಬಯಸಿದ್ದಾರೆ. | |
| 15. | ಮುದ್ದು ಪಾರಿವಾಳಗಳ ಜೋಡಿ ಎಲ್ಲಿ ಸಂಸಾರ ಹೂಡಿತ್ತು ?<br>***ಉತ್ತರ :***<br>ಮುದ್ದು ಪಾರಿವಾಳಗಳ ಜೋಡಿ ದಟ್ಟವಾದ ಕಾಡಿನ ಹೆಮ್ಮರವೊಂದರ ಹೊದರಿನಲ್ಲಿ ಸಂಸಾರ ಹೂಡಿತ್ತು. | |
| 16. | ಪಾರಿವಾಳಗಳು ಯಾವಾಗ ಆನಂದಿಸಿದವು ?<br>***ಉತ್ತರ :***<br>ಪಾರಿವಾಳಗಳು ಮುದ್ದು ಮರಿಗಳ ಮಧುರ ಸದ್ದನ್ನು ಕೇಳಿದಾಗ ಆನಂದಿಸಿದವು. | |
| | **ಮೂರು–ನಾಲ್ಕು ವಾಕ್ಯಗಳಲ್ಲಿ ಉತ್ತರ ಬರೆಯುವುದು (ಉತ್ತರದ ಅಂಶಗಳನ್ನಾಧರಿಸಿ ಪ್ರತಿ ಪ್ರಶ್ನೆಗೂ ಎರಡು ಅಂಕಗಳು) :** | 16 × 2 = 32 |
| 17. | ಸಾಧಕನ ಯೋಗಕ್ಷೇಮವನ್ನು ಸಮಾಜ ಹೇಗೆ ನಿರ್ವಹಿಸುತ್ತಿತ್ತು ?<br>***ಉತ್ತರ :***<br>ಸಾಧಕನಿಗೆ ಯಾವುದೇ ತೊಂದರೆ ಆಗಬಾರದು. ಅವನನ್ನು ಸಮಾಜವೇ ನೋಡಿಕೊಳ್ಳಬೇಕೆಂದು ಎಲ್ಲಾ ಧರ್ಮಗಳು ಹೇಳಿವೆ. ಅದಕ್ಕಾಗಿ ಧರ್ಮಶಾಲೆಗಳು, ವಿಹಾರಗಳು, ಅನ್ನಛತ್ರಗಳು ದೇವಸ್ಥಾನಗಳು ಹಾಗೂ ಮಠಗಳು ಉಚಿತ ಸೇವೆಯನ್ನು ನೀಡಲು ಇಂತಹವರಿಗಾಗಿ ಏರ್ಪಟ್ಟವು. ಕೆಲವರು ತಮ್ಮ ಮನೆಯಲ್ಲಿಯೇ ಇಟ್ಟುಕೊಂಡು ಯೋಗಕ್ಷೇಮವನ್ನು ನೋಡಿಕೊಂಡವರು ಇದ್ದಾರೆ. ಹೀಗೆ ಸಾಧಕನ ಯೋಗಕ್ಷೇಮವನ್ನು ಸಮಾಜ ನಿರ್ವಹಿಸುತ್ತಿತ್ತು. | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| 18. | 'ಧರ್ಮಸಮದೃಷ್ಟಿ' ಪಾಠದಲ್ಲಿ ರಾಮಾನುಜಾಚಾರ್ಯರ ಗುಣವಿಶೇಷತೆಯನ್ನು ಹೇಗೆ ಕೊಂಡಾಡಲಾಗಿದೆ ? | |
| | ***ಉತ್ತರ :*** | |
| | ರಾಮಾನುಜಾಚಾರ್ಯರು ನಾಸ್ತಿಕ ಸಾಗರಕ್ಕೆ ಮಹಾಬಡವಾಮುಖಾಗ್ನಿಯಂತಿರುವವರು. ಶ್ರೀರಂಗನ ಪಾದಕಮಲಗಳಿಗೆ ಮೂಲದಾಸರಾಗಿರುವ ಅವರು ವೈಕುಂಠಕ್ಕೆ ಮಾರ್ಗತೋರುವವರಾಗಿದ್ದಾರೆ. ಯತಿಗಳಿಗೆ ರಾಜರಾಗಿರುವ ರಾಮಾನುಜಾಚಾರ್ಯರಿಗೆ ಜಯವಾಗಲಿ ಎಂದು ಧರ್ಮಸಮದೃಷ್ಟಿ ಪಾಠದಲ್ಲಿ ರಾಮಾನುಜಾಚಾರ್ಯರ ಗುಣವಿಶೇಷತೆಯನ್ನು ಕೊಂಡಾಡಲಾಗಿದೆ. | |
| 19. | ಬುಕ್ಕರಾಯನು ನಡೆಸಿದ ಧರ್ಮಸಭೆಗೆ ಯಾರನ್ನೆಲ್ಲ ಆಹ್ವಾನಿಸಿದನು ? | |
| | ***ಉತ್ತರ :*** | |
| | ಕೋವಿಲ್ ತಿರುಮಲೆ ಪೆರುಮಾಳ್, ಕೋವಿಲ್ ತಿರುನಾರಾಯಣಪುರದ ಪ್ರಮುಖ ಸಕಲ ಆಚಾರ್ಯರನ್ನು, ಸಕಲ ಸಮಯಿಗಳನ್ನು, ಸಕಲ ಸಾತ್ವಿಕರನ್ನು, ಮೋಷ್ಟಿಕರು, ತಿರುಪಣಿ, ತಿರುವಿಡಿ, ತಣ್ಣೀರವರನ್ನು, ನಲವತ್ತೆಂಟು ಜನಾಂಗದವರನ್ನು, ಸಾಮಂತ ಮಲೆನಾಡಿನವರನ್ನು, ಅಲೆಮಾರಿಗಳು, ಜಾಂಬವ ಕುಲದವರನ್ನು ಒಳಗೊಂಡಂತೆ ನಾಡಿನ ಹದಿನೆಂಟು ಪ್ರಮುಖರನ್ನು ಧರ್ಮಸಭೆಗೆ ವೀರಬುಕ್ಕರಾಯನು ಆಹ್ವಾನಿಸಿದನು. | |
| 20. | ಸ್ವಯಂಚಾಲಿತ ಬಾಗಿಲುಗಳ ಅನ್ವೇಷಣೆಯಲ್ಲಿ ವಿಶ್ವೇಶ್ವರಯ್ಯನವರ ಕೊಡುಗೆಗಳನ್ನು ಬರೆಯಿರಿ. | |
| | ***ಉತ್ತರ :*** | |
| | ವಿಶ್ವೇಶ್ವರಯ್ಯನವರು ಪೂನಾದ ಮುಥಾಕಾಲುವೆಗೆ ನೀರಿನ ನೆಲೆಯಾಗಿದ್ದ ಪೀಪ್ ಜಲಾಶಯಕ್ಕೆ ಸ್ವಯಂಚಾಲಿತ ಬಾಗಿಲುಗಳನ್ನು ಅಳವಡಿಸುವ ಮೂಲಕ ಯಶಸ್ವಿಯಾದರು. ಮುಂದೆ ಗ್ವಾಲಿಯರ್‌ನ ತಿಗ್ರ ಜಲಾಶಯಕ್ಕೂ, ಮೈಸೂರಿನ ಕೃಷ್ಣರಾಜಸಾಗರ ಜಲಾಶಯಕ್ಕೂ ಸ್ವಯಂಚಾಲಿತ ಬಾಗಿಲುಗಳನ್ನು ಅಳವಡಿಸಿ ಅನುಪಮ ಕೊಡುಗೆ ನೀಡಿದರು. | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| 21. | 'ವಚನಧರ್ಮ'ದ ಬಗೆಗೆ ದೇವನೂರರ ಅಭಿಪ್ರಾಯ ಏನು ?<br>***ಉತ್ತರ :***<br>ಕರ್ನಾಟಕದಲ್ಲಿ ನಡೆದ ಹನ್ನೆರಡನೆಯ ಶತಮಾನದ ವಚನ ಆಂದೋಲನ ಜಗತ್ತಿನಲ್ಲೇ ವೈಶಿಷ್ಟ್ಯ ಪೂರ್ಣವಾದುದು. ಈ ವಚನಧರ್ಮವನ್ನು ಜಾತಿಯ ಬಚ್ಚಲಿನಿಂದ ಮೇಲೆತ್ತಿ ರಕ್ಷಿಸಿದರೆ ಜಗತ್ತಿಗೇ ಬೆಳಕಾಗುವುದು. ಇದು ಜಾತಿಯಾದರೆ ಕೆಟ್ಟ ಜಾತಿ; ಧರ್ಮವಾದರೆ ಮಹೋನ್ನತ ಧರ್ಮ ಎಂದು ದೇವನೂರರು ವಚನಧರ್ಮದ ಬಗ್ಗೆ ಅಭಿಪ್ರಾಯಪಡುತ್ತಾರೆ. | |
| 22. | ಪರಮಹಂಸರ ವ್ಯಕ್ತಿತ್ವದ ವೈಶಿಷ್ಟ್ಯ ಎಂಥದ್ದು ?<br>***ಉತ್ತರ :***<br>ಒಂದು ದೇಹ ಮನಸ್ಸು ಅದೆಷ್ಟು ಮಾಧ್ಯಮವಾಗಬಹುದೋ ಅದಷ್ಟೂ ಒಂದೇ ದೇಹದಲ್ಲಿ ಸಂಭವಿಸಿದ ವ್ಯಕ್ತಿತ್ವ ವೈಶಿಷ್ಟ್ಯ ಪರಮಹಂಸರದು. ಅವರು ಯಾವುದನ್ನೂ ಕೊಲ್ಲದೆ, ಒಳಿತುಗಳನ್ನೇ ಕೂಡಿಸುತ್ತ ಕೂಡಿಸುತ್ತಾ ಹೋದರು. | |
| 23. | ಧರ್ಮಬುದ್ಧಿಗೆ ದುಷ್ಟಬುದ್ಧಿಯು ಯಾವ ಸಲಹೆಯಿತ್ತನು ?<br>***ಉತ್ತರ :***<br>ಧರ್ಮಬುದ್ಧಿ ಮತ್ತು ದುಷ್ಟಬುದ್ಧಿಯರು ವ್ಯಾಪಾರ ಮುಗಿಸಿಬಂದು ಮಧುರಾಪುರದ ಉದ್ಯಾನದಲ್ಲಿ ಬೀಡುಬಿಟ್ಟಿದ್ದರು. ಅರ್ಧರಾತ್ರಿಯಲ್ಲಿ ಧರ್ಮಬುದ್ಧಿಯು ದುಷ್ಟಬುದ್ಧಿಯನ್ನು ಕರೆದು ಸಂಪತ್ತನ್ನೆಲ್ಲ ಹಂಚಿಕೊಳ್ಳೋಣ ಎಂದಾಗ, ನಾವಿಬ್ಬರೂ ಈ ಸಂಪತ್ತನ್ನೆಲ್ಲ ಹಂಚಿಕೊಂಡು ಮನೆಯಲ್ಲಿಯೇ ಸ್ವತಂತ್ರವಾಗಿ ಇರುವವರಲ್ಲ, ಮತ್ತೆ ವ್ಯಾಪಾರಕ್ಕೆ ಹೋಗಲೇಬೇಕು. ಆದ್ದರಿಂದ ನಮ್ಮಿಬ್ಬರಿಗೆ ಖರ್ಚಿಗೆ ಬೇಕಾದಷ್ಟನ್ನು ಹೊನ್ನನ್ನು ತೆಗೆದುಕೊಂಡು ಉಳಿದ ಸಂಪತ್ತನೆಲ್ಲ ಈ ವಟವೃಕ್ಷದ ಬುಡದಲ್ಲಿ ಹೂತಿಡೋಣ ಎಂದು ಧರ್ಮಬುದ್ಧಿಗೆ ದುಷ್ಟಬುದ್ಧಿ ಸಲಹೆಯಿತ್ತನು. | |
| 24. | ಮದಲಿಂಗನ ಕಣಿವೆಯಲ್ಲಿ ಬರುವಾಗ ಶಾನುಭೋಗರು ಏನೆಂದು ಯೋಚಿಸಿದರು ?<br>***ಉತ್ತರ :***<br>ಶಾನುಭೋಗರು ಇರಸಾಲಿಗಾಗಿ ಚಿಕ್ಕನಾಯಕನ ಹಳ್ಳಿಗೆ ಹೋಗಿದ್ದರು. ಖಜಾನೆಗೆ ಹಣಕಟ್ಟಿ ಅಲ್ಲಿಂದ ಮರಳಿ ತಮ್ಮ ಊರಿಗೆ ಹೊರಡುವ ವೇಳೆ ಸಂಜೆ ಆರು ಘಂಟೆಯಾಗಿತ್ತು. ಶಾನುಭೋಗರು ತಮ್ಮೂರಿಗೆ ಕಾಲ್ನಡಿಗೆಯಲ್ಲಿ ಮದಲಿಂಗನ ಕಣಿವೆಯ ಮಾರ್ಗವಾಗಿ ಹೋಗುವಾಗ "ಕಾಡುದಾರಿ, ಆದರೂ ಬೆಳುದಿಂಗಳು ಇದೆ. ಸ್ವಲ್ಪ ದೊಡ್ಡ ಹೆಜ್ಜೆ ಹಾಕಿದರೆ ಊಟದ ಹೊತ್ತಿಗೆ ಊರನ್ನು ಸೇರಿಕೊಳ್ಳಬಹುದು ಎಂದು ಯೋಚಿಸುತ್ತ ನಡೆದರು. | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| 25. | ಹಲಗಲಿಗೆ ದಂಡು ಬರಲು ಕಾರಣವೇನು ?<br>***ಉತ್ತರ :***<br>ಬ್ರಿಟಿಷ್ ಕಂಪನಿಯ ಸರ್ಕಾರವು ಭಾರತೀಯರ ಮೇಲೆ ಹೇರಿದ ನಿಶ್ಶಸ್ತ್ರೀಕರಣ ಕಾಯಿದೆಯನ್ನು ಹಲಗಲಿಯ ಬೇಡರು ವಿರೋಧಿಸುತ್ತಾರೆ. ತಾವು ಆಯುಧಗಳನ್ನು ಕಂಪನಿಯ ಸರ್ಕಾರಕ್ಕೆ ಹಿಂದಿರುಗಿಸಿದರೆ ಬ್ರಿಟಿಷರ ಗುಲಾಮಗಿರಿಯನ್ನು ಒಪ್ಪಿಕೊಂಡಂತಾಗುತ್ತದೆ. ಅಲ್ಲದೇ ತಾವು ಬೇಡರಾಗಿರುವುದರಿಂದ ಆಯುಧಗಳು ಇಲ್ಲದೆ ಬದುಕುವುದು ಅಸಾಧ್ಯವೆಂದು ಅರಿತು, ಆಯುಧಗಳನ್ನು ಕೇಳಲು ಬಂದ ಕಾರಕೂನನ ಕಪಾಳಕ್ಕೆ ಹೊಡೆಯುತ್ತಾರೆ. ದಂಗೆ ಎಬ್ಬಿಸಿ ಹೆಬಲಕ್ ಎಂಬ ಬ್ರಿಟಿಷ್ ಅಧಿಕಾರಿಯನ್ನು ಕೊಲೆಗೈಯುತ್ತಾರೆ. ಇದರಿಂದ ಕ್ರೋಧಗೊಂಡ ಕಾರ ಸಾಹೇಬ ಕಲಾದಗಿಯಿಂದ ದಂಡನ್ನು ಹಲಗಲಿಗೆ ಕಳುಹಿಸುತ್ತಾನೆ. | |
| 26. | ಭಕ್ತಿ ಮತ್ತು ನಿಷ್ಠೆಯ ಬಗ್ಗೆ ಜೇಡರದಾಸಿಮಯ್ಯನ ಅಭಿಪ್ರಾಯವನ್ನು ಬರೆಯಿರಿ.<br>***ಉತ್ತರ :***<br>ಜೀವನದಲ್ಲಿ ದಾಂಪತ್ಯ ಅತ್ಯಂತ ಪವಿತ್ರವಾದ ಸಂಬಂಧ. ಮನಃಪೂರ್ವಕವಾಗಿ ಒಂದಾದ ಸತಿ–ಪತಿಯರ ಭಕ್ತಿ ಭಗವಂತನಿಗೆ ಅತ್ಯಂತ ಪ್ರಿಯವಾದುದು. ಹೊಂದಾಣಿಕೆ ಇರದ ಭಕ್ತಿ ಅಮೃತದಲ್ಲಿ ವಿಷಬೆರೆತಂತೆ ಅಪ್ರಿಯವಾಗಿರುತ್ತದೆ. ಭಕ್ತಿಯ ಸಾಕಾರಕ್ಕೆ ನಿಷ್ಠೆ ಮುಖ್ಯ. ನಿಷ್ಠೆಹೊಂದಿದ ಭಕ್ತ ಅಡವಿಯ ಮಧ್ಯದಲ್ಲಿದ್ದರೂ ಅದು ನಗರವಾಗಿ ಪರಿಣಮಿಸುವುದು. ಅದೇ ಭಕ್ತನಲ್ಲಿ ನಿಷ್ಠೆ ಇರದಿದ್ದರೆ ನಗರವೂ ಅಡವಿಯಾಗುವುದು. ಆದ್ದರಿಂದ ಸಾತ್ವಿಕ ಬದುಕಿನ ಸಾರ್ಥಕತೆ ಸಾಕ್ಷಾತ್ಕಾರವಾಗುವುದು ದೃಢವಾದ ಭಕ್ತಿ ಮತ್ತು ನಿಷ್ಠೆಯ ಸಾಮರಸ್ಯದಿಂದ ಎಂದು ವಚನಕಾರ ಜೇಡರದಾಸಿಮಯ್ಯನವರು ಅಭಿಪ್ರಾಯ ಪಡುವರು. | |
| 27. | ವಾಲ್ಮೀಕಿ ಆಶ್ರಮಕ್ಕೆ ಯಜ್ಞಾಶ್ವವು ಬಂದ ಬಗೆಯನ್ನು ವಿವರಿಸಿ.<br>***ಉತ್ತರ :***<br>ಮಹರ್ಷಿಗಳ ಆದೇಶದ ಮೇರೆಗೆ ಶ್ರೀರಾಮಚಂದ್ರನು ಅಶ್ವಮೇಧಯಾಗ ಕೈಗೊಂಡು, ಸಂಚಾರಕ್ಕೆ ತೆರಳಿದ ಯಜ್ಞಾಶ್ವದ ಬೆಂಗಾವಲಿಗೆ ಸಹೋದರನಾದ ಶತ್ರುಘ್ನನನ್ನು ಕಳುಹಿಸಿರುತ್ತಾನೆ. ದೇಶದೇಶಗಳನ್ನು ಸುತ್ತಾಡಿದ ಅಶ್ವಮೇಧ ಯಜ್ಞಾಶ್ವಕ್ಕೆ ಅನೇಕ ಸಾಮ್ರಾಟರು ನಮಿಸಿ ಮುಂದೆ ಕಳುಹಿಸಿದಾಗ, ಒಂದು ದಿನ ಯಜ್ಞಾಶ್ವವು ವಾಲ್ಮೀಕಿ ಆಶ್ರಮದ ಬಳಿಗೆ ಬರುತ್ತದೆ. ಆಶ್ರಮದ ಒಳಗೆ ಉಪವನದಲ್ಲಿ ಚೆನ್ನಾಗಿ ಬೆಳೆದುನಿಂತ ಹಸಿರು ಹುಲ್ಲನ್ನು ಕಂಡು, ಅದನ್ನು ತಿನ್ನಲು ಬಯಸಿ ಯಜ್ಞಾಶ್ವವು ವಾಲ್ಮೀಕಿ ಆಶ್ರಮದ ವನವನ್ನು ಪ್ರವೇಶಿಸುತ್ತದೆ. | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| 28. | ಕವಯಿತ್ರಿ ದು. ಸರಸ್ವತಿಯವರು ಒಡಲು ಅನುಭವಿಸುವ ಸಂಕಟಕೆ ಗಡಿಯಿಲ್ಲ ಎಂದು ಹೇಳಲು ಕಾರಣವೇನು ?<br>***ಉತ್ತರ :***<br>ಬುದ್ಧಿಶಕ್ತಿ, ಮಾತಿನ ಶಕ್ತಿಯಿಂದ ಮಾನವನು ತಾನೇ ಸರ್ವಾಧಿಕಾರಿ, ತನಗೆ ಮಾತ್ರ ಭೂಮಿಯ ಹಕ್ಕಿದೆ ಎಂಬ ಅಹಂಕಾರದಿಂದ ಗಡಿಯನ್ನು ನಿರ್ಮಿಸಿಕೊಂಡು ಭೇದಭಾವದ ಅಸಮಾನತೆ ಸೃಷ್ಟಿಸಿದನು. ಇದರಿಂದಾದ ಕಾದಾಟದಲ್ಲಿ ಗಡಿಯ ಆಚೆ–ಈಚೆ ಎರಡೂ ಕಡೆ ರಕ್ತಹರಿದು ಜೀವಿಗಳು ಶವವಾದವು. ಈ ಕಾರಣದಿಂದ ಕವಯಿತ್ರಿ ದು. ಸರಸ್ವತಿ ಒಡಲು ಅನುಭವಿಸುವ ಸಂಕಟಕೆ ಗಡಿಯಿಲ್ಲ ಎಂದಿರುವರು. | |
| 29. | ವೈಜ್ಞಾನಿಕ ಸಂಶೋಧನೆಗಳು ಯಾವಾಗ ಅರ್ಥರಹಿತವಾಗುತ್ತವೆ ?<br>***ಉತ್ತರ :***<br>ವಿಜ್ಞಾನಿಯೊಬ್ಬನ ವಸ್ತುಸ್ಥಿರತೆಯ ವಿಶ್ವನಿಯಮ ಸಮಾಜದ ಕೆಲವರಿಗೆ ಮಾತ್ರ ಅನ್ವಯಿಸುವುದಿಲ್ಲವೆಂದರೆ ಅದು ಶತಮೂರ್ಖತನ. ವಸ್ತುವೊಂದು ಶೂನ್ಯದಲ್ಲಿ ಸೃಷ್ಟಿಯಾಗುವುದು ಎನ್ನುವುದು ಮೂರ್ಖತನದ ಪರಮಾವಧಿಯಾಗಿದೆ. ಅಶಿಕ್ಷಿತನೊಬ್ಬ ಹೀಗೆ ಹೇಳಿದರೆ ಕ್ಷಮಿಸಬಹುದು. ಆದರೆ ವಿದ್ಯಾವಂತರೂ ಸಹ ಈ ರೀತಿ ಅಭಿಪ್ರಾಯ ವ್ಯಕ್ತಪಡಿಸುವುದು ಶೋಚನೀಯ. ಇದು ನಿಜವಾದರೆ ಜಗತ್ತಿನ ಎಲ್ಲಾ ವೈಜ್ಞಾನಿಕ ಸಂಶೋಧನೆಗಳು ಅರ್ಥರಹಿತವಾಗುತ್ತವೆ. | |
| 30. | ಭರತ ಚಕ್ರವರ್ತಿಗೆ ತನ್ನ ಹೆಸರನ್ನು ಬರೆಸಲು ಏಕೆ ಸಾಧ್ಯವಾಗಲಿಲ್ಲ ?<br>***ಉತ್ತರ :***<br>ಆದಿತೀರ್ಥಂಕರರ ಮಗ ಭರತ ಚಕ್ರವರ್ತಿ ಷಟ್ಖಂಡಗಳನ್ನು ಗೆದ್ದು ತನ್ನ ಗೆಲುವಿನ ಶಾಸನವನ್ನು ವೃಷಭಾಚಲದಲ್ಲಿ ಬರೆಸಲು ಗರ್ವದಿಂದ ಹೋಗಿರುತ್ತಾನೆ. ಅಲ್ಲಿ ಈಗಾಗಲೇ ಹಿಂದಿನ ಅನೇಕ ಚಕ್ರವರ್ತಿಗಳು ಬರೆಸಿದ ಆತ್ಮಪ್ರಶಂಸೆಗಳು ತುಂಬಿ ಹೋಗಿದವು. ಅಲ್ಲಿ ಭರತ ಚಕ್ರವರ್ತಿಗೆ ಸೂಕ್ತವಾದ ಸ್ಥಳ ದೊರೆಯದೆ ಇರುವ ಕಾರಣ ತನ್ನ ಹೆಸರನ್ನು ಬರೆಸಲು ಸಾಧ್ಯವಾಗಲಿಲ್ಲ. | |
| 31. | 'ಅನ್‌ಟು ದಿಸ್ ಲಾಸ್ಟ್' ಕೃತಿ ಗಾಂಧೀಜಿಯವರ ಮೇಲೆ ಯಾವ ಪರಿಣಾಮ ಬೀರಿತು ?<br>***ಉತ್ತರ :***<br>ಮಹಾತ್ಮ ಗಾಂಧೀಜಿಯವರು ರಸ್ಕಿನ್‌ನ 'ಅನ್‌ಟು ದಿಸ್ ಲಾಸ್ಟ್' ಎಂಬ ಪುಸ್ತಕವನ್ನು ಓದಲು ಪ್ರಾರಂಭಿಸಿದಾಗ ಅದು ಅವರ ಮನಸ್ಸನ್ನು ಸೆರೆಹಿಡಿಯಿತು. ಗಾಂಧೀಜಿಯವರಿಗೆ ಕೈಯಿಂದ ಆ ಪುಸ್ತಕವನ್ನು ಕೆಳಗಿಳಿಸಲು ಸಾಧ್ಯವಾಗಲಿಲ್ಲ. ಆ ಪುಸ್ತಕದಲ್ಲಿನ ಧ್ಯೇಯಗಳಿಗನುಸಾರವಾಗಿ ತಮ್ಮ ಜೀವನವನ್ನು ಬದಲಾಯಿಸಿಕೊಳ್ಳಲು ನಿರ್ಣಯಿಸಿದರು. ಬಾಳಿನಲ್ಲಿ ತತ್‌ಕ್ಷಣ ಪರಿಣಾಮಕಾರಿಯಾದ ಬದಲಾವಣೆ ಮಾಡಿದ ಆ ಪುಸ್ತಕವನ್ನು ಸರ್ವೋದಯವೆಂಬ ಹೆಸರಿನಿಂದ ಗುಜರಾತಿ ಭಾಷೆಗೆ ಅನುವಾದಿಸಿದರು. | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| 32. | 'ಉಪ್ಪು' ಎಂಬ ಉತ್ತರ ಬರುಲು ಹೇಳಿದ ಒಗಟನ್ನು ಬರೆಯಿರಿ.<br>***ಉತ್ತರ :***<br>"ನೀರಲ್ಲೆ ಹುಟ್ಟೋದು ನೀರಲ್ಲೆ ಬೆಳಿಯೋದು<br>ನೀರು ತಾಕಿದರೆ ಮಟಮಾಯ। ಕನ್ನಡದ<br>ಬೆಡಗೀನ ಜಾಣೆ ತಿಳಿದ್ಧೇಳೆ"<br>ಇದು 'ಉಪ್ಪು' ಎಂಬ ಉತ್ತರ ಬರಲು ಹೇಳಿದ ಒಗಟಾಗಿದೆ. | |
| | **ಸಂದರ್ಭವನ್ನು ಸ್ವಾರಸ್ಯದೊಂದಿಗೆ ಬರೆಯುವುದು :** | 6 × 3 = 18 |
| | ಕರ್ತೃ, ಆಕರ ಮತ್ತು ಪಠ್ಯದ ಹೆಸರು | 1 ಅಂಕ |
| | ಸಂದರ್ಭದ ವಿವರಣೆ | 1 ಅಂಕ |
| | ಸ್ವಾರಸ್ಯ ಮತ್ತು ಶೈಲಿ | 1 ಅಂಕ |
| | ಒಟ್ಟು | 3 ಅಂಕಗಳು |
| 33. | "ತಾಯಿ, ದಾರಿಗರಿಗೆ ಬೀಡಿಲ್ಲಿ ದೊರೆಯುವುದೇ ?"<br>***ಉತ್ತರ :***<br>***ಆಯ್ಕೆ :*** ಪ್ರಸ್ತುತ ವಾಕ್ಯವನ್ನು ಪು.ತಿ. ನರಸಿಂಹಾಚಾರ್ಯ ವಿರಚಿತ 'ಶಬರಿ' ಗೀತನಾಟಕದಿಂದ ಆಯ್ದ 'ಶಬರಿ' ಎಂಬ ಗದ್ಯಪಾಠದಿಂದ ಆರಿಸಿಕೊಳ್ಳಲಾಗಿದೆ.<br>***ಸಂದರ್ಭ :*** ಶ್ರೀರಾಮನು ತನ್ನ ಸಹೋದರ ಲಕ್ಷ್ಮಣನ ಜೊತೆಗೆ ಶಬರಿಯು ವಾಸವಿದ್ದ ಮತಂಗಾಶ್ರಮಕ್ಕೆ ಬರುತ್ತಾನೆ. ಅಲ್ಲಿ ಶ್ರೀರಾಮನ ಬರುವಿಕೆಗಾಗಿ ಹಂಬಲಿಸುವ ಶಬರಿಯನ್ನು ಮರೆಯಲ್ಲಿ ನಿಂತು ಗಮನಿಸಿದ ರಾಮನು, ನಂತರ ಆಶ್ರಮವನ್ನು ಪ್ರವೇಶಿಸಿ ಶಬರಿಯ ಬಳಿ ವಿನಯಪೂರ್ವಕವಾಗಿ ಶ್ರೀರಾಮನು ಈ ಮಾತನ್ನು ಕೇಳುತ್ತಾನೆ.<br>***ಸ್ವಾರಸ್ಯ :*** ಶ್ರೀರಾಮನ ಬರುವಿಕೆಗೆ ಹಂಬಲಿಸುವ ಶಬರಿಯ ಬಗ್ಗೆ ತನಗೆ ತಿಳಿದರೂ, ಏನೂ ತಿಳಿಯದವನಂತೆ ವಿನಯಪೂರ್ವಕವಾಗಿ ಶಬರಿಯನ್ನು ತಾಯಿ ಎಂದು ಸಂಬೋಧಿಸಿ ಕೇಳಿರುವ ಈ ಮಾತಿನಲ್ಲಿ ಶ್ರೀರಾಮನ ವ್ಯಕ್ತಿತ್ವ ಸ್ವಾರಸ್ಯ ಪೂರ್ಣವಾಗಿ ಪ್ರತಿಬಿಂಬಿತವಾಗಿದೆ. | |
| 34. | "ಆದರ್ಶ ಪುರುಷರೊಬ್ಬರು ದಿವಾನರಾದದ್ದು ಮೈಸೂರು ಸಂಸ್ಥಾನದ ಪುಣ್ಯ ವಿಶೇಷವೇ ಸರಿ"<br>***ಉತ್ತರ :***<br>***ಆಯ್ಕೆ :*** ಪ್ರಸ್ತುತ ವಾಕ್ಯವನ್ನು ಡಿ.ಎಸ್. ಜಯಪ್ಪಗೌಡ ವಿರಚಿತ 'ದಿವಾನ್ ಸರ್ ಎಂ. ವಿಶ್ವೇಶ್ವರಯ್ಯನವರ ಕಾರ್ಯಸಾಧನೆಗಳು' ಸಂಶೋಧನಾ ಗ್ರಂಥದಿಂದ ಆಯ್ದುಕೊಳ್ಳಲಾದ 'ಭಾಗ್ಯಶಿಲ್ಪಿ ಸರ್ ಎಂ. ವಿಶ್ವೇಶ್ವರಯ್ಯ' ಎಂಬ ಗದ್ಯಪಾಠದಿಂದ ಆರಿಸಿಕೊಳ್ಳಲಾಗಿದೆ. | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| | ***ಸಂದರ್ಭ :*** ಮೈಸೂರು ಸಂಸ್ಥಾನದ ಮಹಾರಾಜರಾಗಿದ್ದ ನಾಲ್ವಡಿ ಕೃಷ್ಣರಾಜರು ವಿಶ್ವೇಶ್ವರಯ್ಯನವರನ್ನು ದಿವಾನರನ್ನಾಗಿ ನೇಮಿಸಿದರು. ದಕ್ಷತೆ ಮತ್ತು ಪ್ರಾಮಾಣಿಕತೆಗೆ ಒತ್ತು ನೀಡಿದ ವಿಶ್ವೇಶ್ವರಯ್ಯನವರು ಆಡಳಿತದಲ್ಲಿ ಹೊಸ ಮಾದರಿಯನ್ನು ಅನುಷ್ಠಾನಗೊಳಿಸಿದರು. ಅಧಿಕಾರ ವಿಕೇಂದ್ರಿಕರಣ., ಸಮಿತಿ ರಚನೆಗೆ ಪ್ರಾಶಸ್ತ್ಯ, ನೇಮಕಾತಿಯಲ್ಲಿ ಸ್ಥಳೀಯರಿಗೆ ಆದ್ಯತೆ ನೀಡಿ ಮೈಸೂರನ್ನು ಮಾದರಿಯನ್ನಾಗಿಸಿದರು. ಆ ಸಂದರ್ಭದಲ್ಲಿ ಮೈಸೂರು ಜನತೆ ಈ ಮೇಲಿನಂತೆ ವಿಶ್ವೇಶ್ವರಯ್ಯನವರನ್ನು ಹಾಡಿಹೊಗಳಿದರು ಎಂದು ಲೇಖಕರು ಹೇಳಿದ್ದಾರೆ. | |
| | ***ಸ್ವಾರಸ್ಯ :*** ಮಾದರಿ ಮೈಸೂರು ರಾಜ್ಯ ನಿರ್ಮಾಣದಲ್ಲಿ ದಿವಾನರಾಗಿ ವಿಶ್ವೇಶ್ವರಯ್ಯನವರ ಪಾತ್ರ ಸ್ಮರಣೀಯವಾದುದು ಎಂಬುದು ಸ್ವಾರಸ್ಯಪೂರ್ಣವಾಗಿ ಹೇಳಲ್ಪಟ್ಟಿದೆ. | |
| 35. | "ನಿನ್ನ ಪಟುವಗೆ ನಮ್ಮ ಕುಲಮನೆಲ್ಲಮನಟಿವ ಬಗೆ" | |
| | ***ಉತ್ತರ :*** | |
| | ***ಆಯ್ಕೆ :*** ಪ್ರಸ್ತುತ ವಾಕ್ಯವನ್ನು ದುರ್ಗಸಿಂಹ ಕವಿ ವಿರಚಿತ 'ಕರ್ಣಾಟಕ ಪಂಚತಂತ್ರಂ' ಎಂಬ ಕೃತಿಯಿಂದ ಆಯ್ದುಕೊಳ್ಳಲಾದ 'ವೃಕ್ಷಸಾಕ್ಷಿ' ಎಂಬ ಗದ್ಯಪಾಠದಿಂದ ಆರಿಸಿಕೊಳ್ಳಲಾಗಿದೆ. | |
| | ***ಸಂದರ್ಭ :*** ಧರ್ಮಾಧಿಕರಣರು ವಟವೃಕ್ಷವನ್ನು ಸಾಕ್ಷಿ ಮಾಡಲು ಒಪ್ಪಿ, ನಾಳೆ ಮುಂಜಾನೆ ನ್ಯಾಯ ತೀರ್ಮಾನ ಎಂದು ನಿಶ್ಚಯಿಸಿದಾಗ ತನ್ನ ಮನೆಗೆ ಬಂದ ದುಷ್ಟಬುದ್ಧಿಯು ತನ್ನ ತಂದೆಯನ್ನು ಏಕಾಂತಕ್ಕೆ ಕರೆದುಕೊಂಡು ಹೋಗಿ ಅದುವರೆಗೆ ನಡೆದ ಎಲ್ಲಾ ವಿಚಾರವನ್ನು ತಿಳಿಸಿದನು. ನಂತರ ತಂದೆಗೆ ನಾವು ಮುಂದೆ ಸುಖವಾಗಿ ಬಾಳಲು ನೀನು ವಟವೃಕ್ಷದಲ್ಲಿ ಅಡಗಿ ಧರ್ಮಬುದ್ಧಿಯೇ ಹೊನ್ನನ್ನು ಕಳ್ಳತನ ಮಾಡಿರುವನೆಂದು ಹೇಳು ಎಂಬುದಾಗಿ ತಿಳಿಸಿದಾಗ. ಅದಕ್ಕೊಪ್ಪದ ತಂದೆ ಮಗನಾದ ದುಷ್ಟಬುದ್ಧಿಗೆ ಬುದ್ಧಿಯ ಮಾತನ್ನು ಹೇಳುವ ಸಂದರ್ಭದಲ್ಲಿ ಈ ಮಾತನ್ನು ಹೇಳುತ್ತಾನೆ. | |
| | ***ಸ್ವಾರಸ್ಯ :*** 'ಮಾಡಿದ್ದುಣ್ಣೋ ಮಹರಾಯ' ಎಂಬ ಗಾದೆಯ ಮಾತಿನಂತೆ ನಾವು ಮಾಡುವ ಕೆಟ್ಟ ಕಾರ್ಯಗಳು ಕುಲಕ್ಕೆ ಕಳಂಕವಾಗಿ ಅವು ನಮ್ಮ ಕುಲವನ್ನೇ ನಾಶಪಡಿಸುವುವು ಎಂಬುದು ಈ ಮಾತಿನಲ್ಲಿ ಸ್ವಾರಸ್ಯಪೂರ್ಣವಾಗಿ ವ್ಯಕ್ತವಾಗಿದೆ. | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| 36. | "ಎಲ್ಲ ಜನರಿಗೆ ಜೋರ ಮಾಡಿ ಕಸಿದುಕೊಳ್ಳಿರಿ ಹತಾರ"<br>***ಉತ್ತರ :***<br>***ಆಯ್ಕೆ :*** ಪ್ರಸ್ತುತ ವಾಕ್ಯವನ್ನು ಡಾ. ಬಿ.ಎಸ್. ಗದ್ದಗಿಮಠರವರು ಸಂಪಾದಿಸಿರುವ 'ಕನ್ನಡ ಜನಪದ ಗೀತೆಗಳು' ಎಂಬ ಕೃತಿಯಿಂದ ಆಯ್ದುಕೊಳ್ಳಲಾದ 'ಹಲಗಲಿ ಬೇಡರು' ಎಂಬ ಪದ್ಯಪಾಠದಿಂದ ಆರಿಸಿಕೊಳ್ಳಲಾಗಿದೆ.<br>***ಸಂದರ್ಭ :*** 1857 ರ ಪ್ರಥಮ ಸ್ವಾತಂತ್ರ್ಯ ಸಂಗ್ರಾಮದ ಅನಂತರ ಬ್ರಿಟಿಷರು ಭಾರತೀಯರ ಮೇಲೆ ನಿಶ್ಶಸ್ತ್ರೀಕರಣದ ಆದೇಶವನ್ನು ಹೂರಡಿಸಿದರು. ಈ ಶಾಸನದ ಪ್ರಕಾರ ಭಾರತೀಯರೆಲ್ಲರು ತಮ್ಮಲ್ಲಿರುವ ಆಯುಧಗಳನ್ನು ಬ್ರಿಟಿಷ್ ಸರ್ಕಾರಕ್ಕೆ ಒಪ್ಪಿಸಬೇಕಾಗಿತ್ತು. ಈ ಆದೇಶವನ್ನು ಭಾರತೀಯರು ಪ್ರತಿಭಟಿಸಿದಾಗ ಬ್ರಿಟಿಷ್ ಕಂಪನಿ ಸರ್ಕಾರವು ಈ ಮೇಲಿನಂತೆ ಆದೇಶ ಮಾಡುತ್ತದೆ.<br>***ಸ್ವಾರಸ್ಯ :*** ಬ್ರಿಟಿಷರ ಆಡಳಿತವು ದರ್ಪ ಮತ್ತು ದೌರ್ಜನ್ಯಗಳಿಂದ ಕೂಡಿ ಸರ್ವಾಧಿಕಾರದ ಆಡಳಿತವಾಗಿತ್ತು ಎಂಬುದು ಪ್ರಸ್ತುತ ವಾಕ್ಯದಿಂದ ಸ್ವಾರಸ್ಯಪೂರ್ಣವಾಗಿ ತಿಳಿದು ಬರುವುದು. | |
| 37. | "ನುಡಿದರೆ ಮಾಣಿಕ್ಯದ ದೀಪ್ತಿಯಂತಿರಬೇಕು"<br>***ಉತ್ತರ :***<br>***ಆಯ್ಕೆ :*** ಪ್ರಸುತ್ತ ವಾಕ್ಯವನ್ನು ಸಂ.ಶಿ. ಭೂಸನೂರುಮಠ ಅವರು ಸಂಪಾದಿಸಿರುವ 'ವಚನ ಸಾಹಿತ್ಯ ಸಂಗ್ರಹ' ಗ್ರಂಥದಿಂದ ಆಯ್ದುಕೊಳ್ಳಲಾದ 'ವಚನಸೌರಭ' ಎಂಬ ಪದ್ಯಪಾಠದಿಂದ ಆರಿಸಿಕೊಳ್ಳಲಾಗಿದೆ.<br>***ಸಂದರ್ಭ :*** ನಾವು ಆಡುವ ಮಾತು ಶುದ್ಧ, ಸ್ಪಷ್ಟ, ಮಿಗಿಲಾಗಿ ಅರ್ಥಪೂರ್ಣವಾಗಿರಬೇಕು. ನುಡಿದಂತೆ ನಡೆದಾಗ ಮಾತ್ರ ಮಾತಿಗೆ ಬೆಲೆ ಇರುವುದು. ಪರಮಾತ್ಮನು ಸಹ ಅದನ್ನು ಮೆಚ್ಚುವನು ಎಂದು ಮಾತಿನ ಮಹತ್ವ ಹೇಳುವ ಸಂದರ್ಭದಲ್ಲಿ ಬಸವಣ್ಣನವರು ನುಡಿಯನ್ನು ಮಾಣಿಕ್ಯದ ದೀಪ್ತಿಗೆ ಹೋಲಿಸುತ್ತ ಈ ಮಾತನ್ನು ಹೇಳುತ್ತಾರೆ.<br>***ಸ್ವಾರಸ್ಯ :*** ನುಡಿದಂತೆ ನಡೆಯುವುದು ಸುಖೀ ಸಮಾಜ ನಿರ್ಮಾಣಕ್ಕೆ ಕಾರಣವಾಗುವುದು. ಅದು ಸಮಾಜಕ್ಕೆ ಬೆಳಕನ್ನು ನೀಡುವುದೆಂಬ ಸ್ವಾರಸ್ಯವು ಈ ಮಾತಿನಲ್ಲಿ ವ್ಯಕ್ತಗೊಂಡಿದೆ. | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| 38. | "ಅರಸುಗಳ ವಾಜಿಯಂ ಬಿಡು"<br>***ಉತ್ತರ :***<br>***ಆಯ್ಕೆ :*** ಪ್ರಸ್ತುತ ವಾಕ್ಯವನ್ನು ಲಕ್ಷ್ಮೀಶ ಕವಿ ವಿರಚಿತ 'ಜೈಮಿನಿ ಭಾರತ' ಕಾವ್ಯದಿಂದ ಆಯ್ದುಕೊಳ್ಳಲಾದ 'ವೀರಲವ' ಎಂಬ ಪದ್ಯಪಾಠದಿಂದ ಆರಿಸಲಾಗಿದೆ.<br>***ಸಂದರ್ಭ :*** ವಾಲ್ಮೀಕಿ ಆಶ್ರಮದಲ್ಲಿ ಚೆನ್ನಾಗಿ ಬೆಳೆದು ನಿಂತ ಹಸುರನ್ನು ತಿನ್ನಲು ಬಯಸಿ ಶ್ರೀರಾಮನ ಯಜ್ಞಾಶ್ವವು ಆಶ್ರಮವನ್ನು ಕಂಡು ಪ್ರವೇಶಿಸಿ, ತೋಟವನ್ನು ತುಳಿದು ನಾಶಪಡಿಸುತ್ತಿರುವುದನ್ನು ಕ್ಷತ್ರೀಯ ಗುಣ ಸಂಪನ್ನನಾದ ವೀರ ಲವನು ಕುದುರೆಯ ಬಳಿಗೆ ಬಂದು ಅದರ ಹಣೆಯಲ್ಲಿ ಬರೆದಿದ್ದ ಬರಹವನ್ನು ಓದಿ, ತನ್ನ ಉತ್ತರೀಯದಿಂದ ಕುದುರೆಯನ್ನು ಕಟ್ಟಿಹಾಕುವನು. ಇದನ್ನು ಕಂಡು ಹೆದರಿದ ಮುನಿಪುತ್ರರು ಲವನಿಗೆ ಈ ಮಾತನ್ನು ಹೇಳುವರು.<br>***ಸ್ವಾರಸ್ಯ :*** ರಾಜರ ಕುದುರೆಯನ್ನು ಕಟ್ಟಿ ಹಾಕುವುದು ಅಪರಾಧ. ಇದರಿಂದ ತಮಗೆ ಮುಂದೆ ತೊಂದರೆಯಾಗಬಹುದೆಂದು ತಿಳಿದು ಮುನಿಪುತ್ರರು ಹೆದರಿರುವುದು ಈ ಮಾತಿನಲ್ಲಿ ಸ್ವಾರಸ್ಯಪೂರ್ಣವಾಗಿ ಮೂಡಿಬಂದಿದೆ.<br>**ಸಾಹಿತಿ / ಕವಿಗಳ ಜನ್ಮಸ್ಥಳ, ಕಾಲ, ಕೃತಿ ಮತ್ತು ಬಿರುದು / ಪ್ರಶಸ್ತಿಗಳನ್ನು ಕುರಿತು ವಾಕ್ಯರೂಪದಲ್ಲಿ ಬರೆಯುವುದು :** | $2 \times 3 = 6$ |
| | ಜನ್ಮಸ್ಥಳ, ಕಾಲ | 1 ಅಂಕ |
| | ಕೃತಿ, ಪ್ರಶಸ್ತಿ / ಬಿರುದು | 1 ಅಂಕ |
| | ವಾಕ್ಯರೂಪದಲ್ಲಿ ಬರೆಯುವುದು, ಭಾಷಾಶೈಲಿಗೆ | 1 ಅಂಕ |
| | ಒಟ್ಟು | 3 ಅಂಕಗಳು |
| 39. | ಎ.ಎನ್. ಮೂರ್ತಿರಾವ್ :<br>***ಉತ್ತರ :***<br>ಆಧುನಿಕ ಕನ್ನಡದ ಪ್ರಮುಖ ಗದ್ಯ ಬರಹಗಾರರು, ಪ್ರಬಂಧಕಾರರಾಗಿ ಪ್ರಸಿದ್ಧಿ ಪಡೆದ ಅಕ್ಕಿಹೆಬ್ಬಾಳು ನರಸಿಂಹ ಮೂರ್ತಿರಾವ್ ಅವರು ಮಂಡ್ಯ ಜಿಲ್ಲೆಯ ಅಕ್ಕಿಹೆಬ್ಬಾಳಿನಲ್ಲಿ ಕ್ರಿ.ಶ. ೧೯೦೦ ರಲ್ಲಿ ಜನಿಸಿದರು. ಶ್ರೀಯುತರು ಸಮಗ್ರ ಲಲಿತ ಪ್ರಬಂಧಗಳು, ಹಗಲುಗನಸುಗಳು, ಅಲೆಯುವ ಮನ, ಅಪರವಯಸ್ಕನ ಅಮೆರಿಕಾಯಾತ್ರೆ, ಚಂಡಮಾರುತ, ಮಿನುಗು–ಮಿಂಚು, ಪೂರ್ವಸೂರಿಗಳೊಡನೆ, ದೇವರು, ಚಿತ್ರಗಳು – ಪತ್ರಗಳು ಮೊದಲಾದ ಪ್ರಮುಖ ಕೃತಿಗಳನ್ನು ರಚಿಸಿದ್ದಾರೆ. ಇವರಿಗೆ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ, ಪಂಪ ಪ್ರಶಸ್ತಿ, ಮೈಸೂರು ವಿಶ್ವವಿದ್ಯಾನಿಲಯ ಗೌರವ ಡಿ.ಲಿಟ್. ಪದವಿ ಲಭಿಸಿವೆ. ಇವರು ೧೯೮೪ ರಲ್ಲಿ ಕೈವಾರದಲ್ಲಿ ಸಮಾವೇಶಗೊಂಡ ೫೬ನೆಯ ಅಖಿಲಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾಗಿದ್ದರು. | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| 40. | ದ.ರಾ. ಬೇಂದ್ರೆ :<br>***ಉತ್ತರ :***<br>ಅಂಬಿಕಾತನಯದತ್ತ ಎಂಬ ಕಾವ್ಯನಾಮದಿಂದ ಪ್ರಸಿದ್ಧರಾದ ವರಕವಿ ದತ್ತಾತ್ರೇಯ ರಾಮಚಂದ್ರ ಬೇಂದ್ರೆಯವರು ಕ್ರಿ.ಶ. ೧೮೯೬ ರಲ್ಲಿ ಧಾರವಾಡದಲ್ಲಿ ಜನಿಸಿದರು. ನವೋದಯ ಕನ್ನಡ ಸಾಹಿತ್ಯದ ಪ್ರಮುಖ ಕವಿಗಳಲ್ಲಿ ಒಬ್ಬರಾದ ದ.ರಾ. ಬೇಂದ್ರೆಯವರು ಗರಿ, ಕೃಷ್ಣಕುಮಾರಿ, ನಾಕುತಂತಿ, ಉಯ್ಯಾಲೆ, ಸಖೀಗೀತ, ನಾದಲೀಲೆ, ಅರಳು–ಮರಳು, ಮೇಘದೂತ, ಗಂಗಾವತರಣ, ಸೂರ್ಯಪಾನ, ನಗೆಯ–ಹೊಗೆ, ಸಾಹಿತ್ಯ ವಿರಾಟ್ ಸ್ವರೂಪ ಮೊದಲಾದ ಕೃತಿಗಳನ್ನು ರಚಿಸಿದ್ದಾರೆ. ಶ್ರೀಯುತರಿಗೆ ಜ್ಞಾನಪೀಠ ಪ್ರಶಸ್ತಿ, ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಲಭಿಸಿವೆ. ಪದ್ಮಶ್ರೀ ಪುರಸ್ಕಾರಕ್ಕೆ ಭಾಜನರಾಗಿರುವ ಬೇಂದ್ರೆಯವರು ೧೯೪೩ ರಲ್ಲಿ ಶಿವಮೊಗ್ಗದಲ್ಲಿ ಸಮಾವೇಶಗೊಂಡ ೨೭ನೆಯ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾಗಿದ್ದರು. | |
| 41. | **ಪದ್ಯಭಾಗ ಪೂರ್ಣ ಮಾಡುವುದು : (ತಪ್ಪಿಲ್ಲದೇ ಬರೆದ ಪ್ರತಿ ಪೂರ್ಣಸಾಲಿಗೆ 1 ಅಂಕ)**<br>ಕೊರಳ ಸೆರೆ ಹಿಗ್ಗಿದವು ದೃಗುಜಲ<br>.................................................................<br>.................................................................<br>.................................................................<br>.................................................................<br>ನರುಹಿ ಕೊಂದನು ಹಲವು ಮಾತೇನೆಂದು ಚಿಂತಿಸಿದ.<br>***ಅಥವಾ***<br>ಮಾರಿಗೌತಣವಾಯ್ತು ನಾಳಿನ<br>.................................................................<br>.................................................................<br>.................................................................<br>.................................................................<br>ವೀರರೈವರ ನೋಯಿಸೆನು ರಾಜೀವಸಖನಾಣೆ.<br>***ಉತ್ತರ :***<br>ಕೊರಳ ಸೆರೆ ಹಿಗ್ಗಿದವು ದೃಗುಜಲ<br>ಉರವಣಿಸಿ ಕಡು ನೊಂದನಕಟಾ<br>ಕುರುಪತಿಗೆ ಕೇಡಾದುದೆಂದನು ತನ್ನ ಮನದೊಳಗೆ<br>ಹರಿಯ ಹಗೆ ಹೊಗೆದೋರದುರುಹದೆ<br>ಬರಿದೆ ಹೋಹುದೆ ತನ್ನ ವಂಶವ<br>ನರುಹಿ ಕೊಂದನು ಹಲವು ಮಾತೇನೆಂದು ಚಿಂತಿಸಿದ.<br>**ಅಥವಾ** | $1 \times 4 = 4$ |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| | ಮಾರಿಗೌತಣವಾಯ್ತು ನಾಳಿನ<br>ಭಾರತವು ಚತುರಂಗ ಬಲದಲಿ<br>ಕೌರವನ ಋಣ ಹಿಂಗೆ ರಣದಲಿ ಸುಭಟಕೋಟಿಯನು<br>ತೀರಿಸಿಯೆ ಪತಿಯವಸರಕ್ಕೆ ಶ<br>ರೀರವನು ನೂಕುವೆನು ನಿನ್ನಯ<br>ವೀರರೈವರ ನೋಯಿಸೆನು ರಾಜೀವಸಖನಾಣೆ. | |
| 42. | **ಪದ್ಯಭಾಗವನ್ನು ಓದಿ, ಅರ್ಥಮಾಡಿಕೊಂಡು, ಮೌಲ್ಯವನ್ನಾಧರಿಸಿ ಸಾರಾಂಶ ಬರೆಯುವುದು :** | 1 × 4 = 4 |
| | ವಿಷಯಾಂಶಕ್ಕೆ | 3 ಅಂಕಗಳು |
| | ಅಡಕಗೊಂಡ ಮೌಲ್ಯ ಗುರುತಿಸುವುದು, ಪದಬಂಧ ಮತ್ತು ಭಾಷಾಶೈಲಿಗೆ | 1 ಅಂಕ |
| | ಒಟ್ಟು | 4 ಅಂಕಗಳು |
| | ಸುತ್ತಲು ಕವಿಯುವ ಕತ್ತಲೆಯೊಳಗೆ<br>ಪ್ರೀತಿಯ ಹಣತೆಯ ಹಚ್ಚೋಣ<br>ಬಿರುಗಾಳಿಗೆ ಹೊಯ್ದಾಡುವ ಹಡಗನು<br>ಎಚ್ಚರದಲಿ ಮುನ್ನಡೆಸೋಣ. | |
| | ***ಉತ್ತರ :*** | |
| | ಕವಿ ಜಿ.ಎಸ್. ಶಿವರುದ್ರಪ್ಪನವರು 'ಸಂಕಲ್ಪಗೀತೆ' ಎಂಬ ಕವನದಲ್ಲಿ ದೃಢಸಂಕಲ್ಪದಿಂದ ಹೇಗೆ ಯಶಸ್ಸುಗಳಿಸಬಹುದು ಎಂಬುದನ್ನು ಹೇಳಿದ್ದಾರೆ. ಜಗತ್ತಿನಲ್ಲಿ ಇಂದು ಜಾತಿ, ಮತ, ಭಾಷೆ, ಅಜ್ಞಾನ, ಮೂಢನಂಬಿಕೆ ಮೊದಲಾದವುಗಳಿಂದ ಜನರ ಸುತ್ತಲೂ ದ್ವೇಷವೆಂಬ ಕತ್ತಲೆ ಆವರಿಸಿದೆ. ಈ ಕತ್ತಲೆಯನ್ನು ಹೋಗಲಾಡಿಸಲು ಬೆಳಕು ಅವಶ್ಯಕವಾಗಿದೆ. ದ್ವೇಷದ ಕತ್ತಲೆ ತುಂಬಿರುವ ಸಮಾಜದಲ್ಲಿ ದೃಢನಿಷ್ಠೆಯಿಂದ ಸ್ವಾಸ್ಥ್ಯದ ನೆಲೆಯಾಗಿಸುವ ಪ್ರೀತಿಯ ಹಣತೆಯನ್ನು ಹಚ್ಚಿದಾಗ ಕತ್ತಲೆ ದೂರವಾಗುವುದು. ಅದರಿಂದ ದ್ವೇಷರಹಿತ ಸಮಾಜ ನಿರ್ಮಾಣವಾಗುವುದು. ಜನರಲ್ಲಿನ ಅಜ್ಞಾನದ ಬಿರುಗಾಳಿಗೆ ಬದುಕೆಂಬ ಹಡುಗು ಸಿಲುಕಿಹಾಕಿಕೊಂಡು ಎತ್ತೆತ್ತಲೋ ಸಾಗುತ್ತಿದೆ. ಅದನ್ನು ಬಹು ಎಚ್ಚರಿಕೆಯಿಂದ ಸರಿದಾರಿಯಲ್ಲಿ ಮುನ್ನಡೆಸುವ ಅಗತ್ಯವಿದೆ. ಜೀವನದಲ್ಲಿ ಯಾವುದೇ ಸವಾಲುಗಳು ಎದುರಾದಾಗ ದೃಢಸಂಕಲ್ಪ, ಆತ್ಮವಿಶ್ವಾಸದಿಂದ ಕ್ರಿಯಾಶೀಲರಾದಾಗ ಯಶಸ್ಸು ಸಿಗುತ್ತದೆ. | |
| | ಜೀವನದಲ್ಲಿ ಧನಾತ್ಮಕ ಭಾವನೆಯನ್ನು ಧೃಡಸಂಕಲ್ಪವನ್ನು ಹೊಂದಿರಬೇಕು. ಪ್ರೀತಿಯಿಂದ, ಬಹು ಎಚ್ಚರಿಕೆಯಿಂದ ಜೀವನವನ್ನು ಸಾಗಿಸಿದಾಗ ಸ್ವಾಸ್ಥ್ಯಯುತ ಸಮಾಜ ನಿರ್ಮಾಣವಾಗುವುದೆಂಬ ಮೌಲ್ಯವನ್ನು ಪ್ರಸ್ತುತ ಪದ್ಯವು ಅರ್ಥೈಸುವುದು. | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| 43. | **ಎಂಟು–ಹತ್ತು ವಾಕ್ಯಗಳಲ್ಲಿ ಉತ್ತರಿಸುವುದು :** | 2 × 4 = 8 |
| | ಅಂಶಗಳನ್ನಾಧರಿಸಿ ಪಠ್ಯಾಂಶಕ್ಕೆ | 3 ಅಂಕಗಳು |
| | ಭಾಷಾಶೈಲಿಗೆ, ಪದಬಂಧಗಳಿಗೆ | 1 ಅಂಕ |
| | ಒಟ್ಟು | 4 ಅಂಕಗಳು |

ಗೊರೂರು ರಾಮಸ್ವಾಮಿ ಅಯ್ಯಂಗಾರರ ವೇಷಭೂಷಣಗಳು ಹೇಗಿದ್ದವು ?

**ಅಥವಾ**

ಖಾದಿ ಬಟ್ಟೆಯ ವೈಶಿಷ್ಟ್ಯವನ್ನು ಗೊರೂರರು ಅಮೇರಿಕದ ಉಪಾಧ್ಯಾಯರು ಮತ್ತು ವಿದ್ಯಾರ್ಥಿಗಳಿಗೆ ಹೇಗೆ ಪರಿಚಯಿಸಿದರು ? ವಿವರಿಸಿ.

***ಉತ್ತರ :***

ಗೊರೂರು ರಾಮಸ್ವಾಮಿ ಅಯ್ಯಂಗಾರ್‌ರವರು ದಪ್ಪನಾದ ಖಾದಿಯ ನೂಲಿನಿಂದ ನೆಯ್ದ ಅಗಲವಾದ ಎಂಟೂವರೆ ಮೊಳ ಉದ್ದದ ಖಾದಿ ಕಚ್ಚೆ ಪಂಚೆಯನ್ನು ಉಟ್ಟಿದ್ದರು. ಭರ್ಜರಿಯಾಗಿ ಕಾಣುವ ಪಂಚೆಗೆ ಅಗಲವಾದ ಕೆಂಪು ಕಂಬಿ, ಕಂಬಿಯ ತುದಿಯಲ್ಲಿ ನಾಲ್ಕು ಜರಿಗೆರೆಗಳು ಇದ್ದವು. ಚಳಿಗಾಗಿ ಅವರು ಒಂದು ಕೆಂಪು ಉಣ್ಣೆಯ ಶಾಲು, ಮಫ್ಲರ್ ಕಟ್ಟಿದ್ದರು. ಶಾಲೆಗೆ ಹೋಗುವ ಆತುರದಲ್ಲಿ ಅದು ಸಡಿಲವಾದುದರಿಂದ ಹೆಗಲ ಮೇಲೆ ಹಾಕಿಕೊಂಡಿದ್ದರು. ಕಾವಿ ಬಣ್ಣದ ನೀಳವಾದ ಜುಬ್ಬ, ಹಣೆಯಲ್ಲಿ ಢಾಳಾದ ಕೆಂಪು ನಾಮವನ್ನು ಧರಿಸಿದ್ದರು ತಲೆಯ ಮೇಲ ಕೆದರಿ ನಿಂತಿದ್ದ ಕೂದಲು, ಬಿಳಿಯ ಗಡ್ಡ, ಮೀಸೆ, ಕಾಲಿಗೆ ದಪ್ಪನಾದ ಎಕ್ಕಡ, ಮೈಯ ಉಡುಪುಗಳಲ್ಲಿ ಏಳೆಂಟು ಬಣ್ಣಗಳ ಹೊಳಪುಳ್ಳ ವಿಚಿತ್ರವಾದ ಗೊರೂರವರ ವೇಷಭೂಷಣಗಳನ್ನು ನೋಡಿದ ಅಮೇರಿಕಾದ ಶಾಲೆಯ ಉಪಾಧ್ಯಾಯರು, ಮಕ್ಕಳು ನಕ್ಕರು. ಹುಡುಗರು ಪೈಡ್ ಪೈಪರ್, ಸಾಂತಾಕಾಸ್ ಎಂದೆಲ್ಲ ಕೂಗಿದರು.

**ಅಥವಾ**

ಅಮೇರಿಕಾದ ಶಾಲೆಯೊಂದಕ್ಕೆ ಗೊರೂರು ರಾಮಸ್ವಾಮಿ ಅಯ್ಯಂಗಾರ್ ಅವರು ಭೇಟಿ ನೀಡಿದಾಗ ಅವರು ಧರಿಸಿದ್ದ ವಿಚಿತ್ರ ವೇಷಭೂಷಣಗಳನ್ನು ನೋಡಿ ಶಾಲೆಯ ಉಪಾಧ್ಯಾಯರು ಮಕ್ಕಳೆಲ್ಲ ಜೋರಾಗಿ ನಕ್ಕರು. ನಂತರ ಉಪಾಧ್ಯಾಯರೊಬ್ಬರು ಗೊರೂರವರನ್ನು ಕುರಿತು "ನಿಮ್ಮ ಉಡುಪು ಸ್ವಲ್ಪ ವಿಚಿತ್ರವಾಗಿದೆ. ಅಲ್ಲದೇ ನಿಮಗೆ ಚಳಿಯಾಗುವುದಿಲ್ಲವೇ ? ನೀವು ಎಲ್ಲಿಂದ ಬಂದಿರುವಿರಿ ?" ಎಂದು ಪ್ರಶ್ನಿಸಿದರು. ಆಗ ಗೊರೂರವರು ತಾವು ಧರಿಸಿದ್ದ ಖಾದಿ ಬಟ್ಟೆಯ ವೈಶಿಷ್ಟ್ಯವನ್ನು ಅಮೇರಿಕಾದ ಉಪಾಧ್ಯಾಯರು ಮತ್ತು ವಿದ್ಯಾರ್ಥಿಗಳಿಗೆ ಪರಿಚಯಿಸಲು ಆರಂಭಿಸಿದರು. "ನಾನು ಗಾಂಧೀಜಿಯವರು ಜನಿಸಿದ ನಾಡಿನಲ್ಲಿ ಜನಿಸಿದವನು. ಭಾರತದ ಹವೆ ಬಹಳ

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| | ಹಿತಕರವಾಗಿರುತ್ತದೆ. ಅಲ್ಲಿ ಅತ್ಯಂತ ಕಡಿಮೆ ಬಟ್ಟೆಗಳಿಂದಲೇ ಜೀವಿಸಬಹುದು. ಈ ಬಟ್ಟೆಯನ್ನು ಭಾರತದಲ್ಲಿ ಪ್ರಚಾರಕ್ಕೆ ತಂದವರು ಗಾಂಧೀಜಿಯವರು. ಇದು ಪೂರ್ಣ ಕೈಯಿಂದಲೇ ತಯಾರಾದ ಬಟ್ಟೆ. ಇದಕ್ಕೆ ಯಾವ ರೀತಿಯಿಂದಲೂ ಯಂತ್ರದ ಸೊಂಕು ಉಂಟಾಗಿಲ್ಲ'' ಎಂದು ಹೇಳಿ ಅವರ ಕುತೂಹಲ ಕೆರಳಿಸಿದರು. ಉಪಾಧ್ಯಾಯರೊಬ್ಬರು ''ಕೈಯಿಂದ ಇದನ್ನು ಮಾಡುವುದು ಹೇಗೋ'' ಎಂದು ಅನುಮಾನ ವ್ಯಕ್ತಪಡಿಸಿದಾಗ ಗೊರೂರು ಅವರು ಚರಕದಿಂದ ನೂಲುವ, ಮಗ್ಗದಿಂದ ನೇಯುವ ವಿಷಯವನ್ನು ಸವಿವರವಾಗಿ ಹೇಳಿ ಅವರ ಅನುಮಾನ ಹೋಗಲಾಡಿಸಿದರು. ಶಾಲೆಯ ಉಪಾಧ್ಯಾಯರು, ಹುಡುಗರು ಅವರು ಧರಿಸಿದ್ದ ಬಟ್ಟೆಯನ್ನು ಮುಟ್ಟಿ ಖಾದಿ ಬಟ್ಟೆಯ ವೈಶಿಷ್ಟ್ಯವನ್ನು ಅರಿತರು. | |
| 44. | ಧೃತರಾಷ್ಟ್ರನು ಸಂಧಿಮಾಡಿಕೊ ಎಂದು ದುರ್ಯೋಧನನಿಗೆ ಹೇಳಲು ಕಾರಣವೇನು ? ವಿವರಿಸಿ.<br>**ಅಥವಾ**<br>ದುರ್ಯೋಧನನ ತಂದೆ–ತಾಯಿಯರು ಅವನನ್ನು ಸಂಧಿಗಾಗಿ ಪ್ರಾರ್ಥಿಸಿದ ರೀತಿಯನ್ನು ವಿವರಿಸಿ.<br>***ಉತ್ತರ :***<br>''ಪುತ್ರಶೋಕಂನಿರಂತರಂ'' ಎಂಬ ಮಾತಿದೆ. ತಂದೆ–ತಾಯಿ ಮಕ್ಕಳ ಸಂಬಂಧ ಅಂತಃಕರಣ ಮಿಡಿಯುವಂಥದ್ದು. ಯುದ್ಧ ಅನಿವಾರ್ಯವೆನಿಸಿದರೂ ಮಕ್ಕಳನ್ನು ಕಳೆದುಕೊಂಡ ತಂದೆ–ತಾಯಿಯರ ದುಃಖ ತೀವ್ರವಾದುದು. ತೊಂಭತ್ತೊಂಭತು ಮಕ್ಕಳನ್ನು ಕಳೆದುಕೊಂಡ ವೃದ್ಧ ದಂಪತಿಗಳಾದ ಧೃತರಾಷ್ಟ್ರ ಮತ್ತು ಗಾಂಧಾರಿಯರು ರಣರಂಗಕ್ಕೆ ಬಂದು ಪ್ರಾರ್ಥಿಸುವ ದೃಶ್ಯ ಹೃದಯ ವಿದ್ರಾವಕವಾದುದು. ಉಳಿದಿರುವ ಒಬ್ಬ ಮಗನಾದ ದುರ್ಯೋಧನನು ಬದುಕಲಿ ಎಂಬ ಭಾವ ಧೃತರಾಷ್ಟ್ರನದು. ರಣರಂಗದಲ್ಲಿ ಬೀಡುಬಿಟ್ಟ ದುರ್ಯೋಧನನ ಬಳಿಗೆ ಬಂದಾಗ ಅವನು ತನ್ನ ತಂದೆ–ತಾಯಿಯರಿಗೆ ವಿನಮ್ರವಾಗಿ ನಮಿಸುತ್ತಾನೆ. ಮಗನನ್ನು ಮುಟ್ಟಿ, ಆಲಿಂಗಿಸಿಕೊಂಡು ಸಂತುಷ್ಟನಾದ ಧೃತರಾಷ್ಟ್ರನು ದುರ್ಯೋಧನನನ್ನು ಕುರಿತು ''ನನಗೂ ಪಾಂಡು ರಾಜನಿಗೂ ಯಾವುದೇ ಭೇದವಿಲ್ಲ. ಪಾಂಡವರೊಂದಿಗೆ ಹೊಂದಿಕೊಂಡು ಈ ಭೂಮಿಯನ್ನು ಹಂಚಿ ರಾಜ್ಯವನ್ನು ಆಳೋಣ. ನಿನ್ನಿಂದಲೇ ಪಾಂಡವರೊಂದಿಗೆ ಯುದ್ಧವಾಯಿತು ಎಂದರೆ ನೀನು ಕೋಪಗೊಳ್ಳುತ್ತೀಯಾ. ಭೀಷ್ಮ, ಕರ್ಣ, ದ್ರೋಣರಿಗೂ ಗೆಲ್ಲಲು ಅಸಾಧ್ಯನಾದ ಅರ್ಜುನನೊಂದಿಗೆ ಇನ್ನು ಯುದ್ಧ ಮಾಡುವವರು ಯಾರೂ ಇಲ್ಲ. ಹಾಗಾಗಿ ಪಾಂಡವರೊಂದಿಗೆ ಸಂಧಿಯೇ ಉಚಿತ. ನೀನು ನನ್ನ ಮಾತನ್ನು ಮನ್ನಿಸಿ ಪಾಂಡವರೊಂದಿಗೆ ಸಂಧಿಯನ್ನು ಮಾಡಿಕೋ'' ಎಂದು ಹೇಳಿದನು.<br>**ಅಥವಾ** | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| | ರಣರಂಗಕ್ಕೆ ಆಗಮಿಸಿದ ಧೃತರಾಷ್ಟ್ರ ಗಾಂಧಾರಿಯರು ಮಗನ ಸ್ಪರ್ಶದಿಂದ ಪುಳಕಿತರಾಗಿ ಆನಂದಭಾಷ್ಪವನ್ನು ಸುರಿಸುವರು. ನಂತರ ಧೃತರಾಷ್ಟ್ರನು ದುರ್ಯೋಧನನನ್ನು ಕುರಿತು "ನನ್ನ ಮಾತನ್ನು ಕೇಳು ಪಾಂಡುರಾಜನಿಗೂ ನನಗೂ ಯಾವುದೇ ವ್ಯತ್ಯಾಸವಿಲ್ಲ. ಪಾಂಡವರೊಂದಿಗೆ ಹೊಂದಿಕೊಂಡು ರಾಜ್ಯವನ್ನು ಹಂಚಿಕೆ ಮಾಡಿ ಆಳ್ವಿಕ ಮಾಡೋಣ. ಭೀಷ್ಮ, ದ್ರೋಣ, ಕರ್ಣರಿಗೆ ಗೆಲ್ಲಲು ಅಸಾಧ್ಯವಾದ ಅರ್ಜುನನೊಂದಿಗೆ ಹೋರಾಟ ಮಾಡುವವರು ಈಗ ಯಾರೂ ಇಲ್ಲ. ದ್ವೇಷಕ್ಕೆ, ಬಾಂಧವ್ಯಕ್ಕೆ ಪ್ರತ್ಯೇಕವಾದ ಸ್ಥಳಗಳಿಲ್ಲ. ನಾವು ಮಾಡುವ ಕೆಲಸದಿಂದ ದ್ವೇಷ ಬಾಂಧವ್ಯಗಳು ಜನಿಸುತ್ತವೆ. ಪ್ರಸಿದ್ಧ ಅರ್ಥಶಾಸ್ತ್ರದಲ್ಲೂ ಇದನ್ನೇ ಹೇಳಲಾಗಿದೆ. ನೀನೊಬ್ಬನು ಬದುಕಿದ್ದರೇ ನಮಗೆ ಸಾಕು. ಎಲ್ಲರೂ ಇದ್ದಹಾಗೆ. ಜಗಕೆ ಸೂರ್ಯನೊಬ್ಬನಿರುವಾಗ ಇತರ ದೀಪಗಳು ಅಪ್ರಯೋಜಕವಾದಂತೆ, ನೀನು ಕುರುವಂಶದ ಸೂರ್ಯ. ನೀನು ಹೇಳಿದಂತೆ ಪಾಂಡವರು ಒಪ್ಪುವ ಹಾಗೆ ಮಾಡುವ ಜವಾಬ್ದಾರಿ ನನ್ನದು. ಅವರು ಎಂದಿಗೂ ನನ್ನ ಮಾತನ್ನು ಮೀರುವವರಲ್ಲ. ಹಾಗಾಗಿ ನನ್ನ ಮಾತನ್ನು ಪ್ರತಿಭಟಿಸದೇ ನೀನು ಒಪ್ಪಿಕೋ" ಎಂದನು. ಧೃತರಾಷ್ಟ್ರನ ಮಾತಿಗೆ ಬೆಂಬಲವಾಗಿ ಗಾಂಧಾರಿಯು "ಕುರುವಂಶವೆಂಬ ಸುಂದರವಾದ ತೋಟವನ್ನು ಭೀಮನೆಂಬ ಮದದಿಂದ ಕುರುಡಾದ ಆನೆಯು ನುಗ್ಗಿ ಚೆನ್ನಾಗಿ ತುಳಿದು ನಾಶಪಡಿಸಿದೆ. ಪುಣ್ಯಕ್ಕೆ ಒಂದು ದೊಡ್ಡ ಮರವು ಉಳಿಯುವಂತೆ ನೀನು ಉಳಿದಿರುವೆ. ಇನ್ನು ಯುದ್ಧ ಮಾಡುವವರು ಯಾರೂ ಉಳಿದಿಲ್ಲ. ಹಾಗಾಗಿ ನನ್ನ ಮಾತು ಕೇಳು, ನಿನ್ನ ತಂದೆಯ ಮಾತಿಗೆ ಬೆಂಬಲ ಸೂಚಿಸು" ಎನ್ನುವಳು. | |
| 45. | **ಗದ್ಯಭಾಗವನ್ನು ಓದಿಕೊಂಡು, ಪ್ರಶ್ನೆಗಳಿಗೆ ಉತ್ತರಿಸುವುದು : (ಅಂಶಗಳನ್ನಾಧರಿಸಿ ಪ್ರತಿ ಸರಿಯುತ್ತರಕ್ಕೆ 2 ಅಂಕಗಳು)** | $2 \times 2 = 4$ |
| | ಮದ್ಯಪಾನವು ಕೇವಲ ಆರ್ಥಿಕ ಹಾನಿಯನ್ನುಂಟು ಮಾಡುತ್ತದೆ ಎಂದಲ್ಲ. ಅದರಿಂದಾಗುವ ಕೆಡುಕುಗಳನ್ನು ನೆನೆಸಿಕೊಂಡರೆ ಸಾಕು ಮೈಮನ ನಡುಗುತವೆ. ಮದ್ಯವು ಇತರ ಆಹಾರಗಳಂತೆ ನಮ್ಮ ಶರೀರಕ್ಕೆ ಶಕ್ತಿಯನ್ನು ನೀಡುವಂತ ಗುಣವಿಶೇಷವನ್ನು ಹೊಂದಿಲ್ಲ. ಅದು ದೇಹಕ್ಕೆ ಹಾನಿಕಾರಕ ಪ್ರತಿಕ್ರಿಯೆಯನ್ನುಂಟು ಮಾಡುವ ಗುಣಗಳಿಂದ ಕೂಡಿರುವುದೆಂದು ತಜ್ಞರ ಪರೀಕ್ಷೆಗಳಿಂದ ದೃಢಪಟ್ಟಿದೆ. ಇದು ಜಠರದಲ್ಲಿ ಕೆರಳಿಕೆಯನ್ನುಂಟು ಮಾಡುವುದು. ಪಿತ್ತಕೋಶ, ಮೂತ್ರ ಪಿಂಡಗಳಲ್ಲಿ ವಿನಾಶಕಾರಕ ಪ್ರತಿಕ್ರಿಯೆಯನ್ನುಂಟು ಮಾಡುವುದು. ನರಗಳ ದೌರ್ಬಲ್ಯವನ್ನುಂಟುಮಾಡಿ ಕರ್ತವ್ಯ ದಕ್ಷತೆಯನ್ನು ನಾಶಪಡಿಸಿ ಸಿಡುಕುತನ, ಮುಂಗೋಪ, ದುರ್ಬುದ್ಧಿಯನ್ನು ಅಧಿಕಗೊಳಿಸುವುದು. ಇದರ ತೀಕ್ಷ್ಣತೆ | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|

ಹೆಚ್ಚಾದಂತೆಲ್ಲ ತೂರಾಡುವ ನಡುಗೆ, ಅಸಂಬದ್ಧವಾದ ಮಾತುಕತೆ, ದುಷ್ಕೃತ್ಯವನ್ನೆಸಗುವ ಮನೋಭಾವಗಳು ಬೆಳೆಯುವುದು. ಅನೇಕ ರೋಗಗಳಿಗೆ ಬಲಿಯಾಗುವರು. ಸಮಾಜಕ್ಕೆ ಕಂಟಕಪ್ರಾಯರಾಗುವರು. ಕುಡಿತದ ಪರಿಣಾಮವಾಗಿ ವ್ಯಕ್ತಿಯು ತಾನು ಆರ್ಥಿಕವಾಗಿ, ದೈಹಿಕವಾಗಿ ಹಾಳಾಗುವುದರ ಜೊತೆಗೆ ರಾಷ್ಟ್ರೀಯ ಆರ್ಥಿಕಾಭಿವೃದ್ಧಿಗೂ, ಆರೋಗ್ಯಕ್ಕೂ, ಸಾಮಾಜಿಕ ನೆಮ್ಮದಿಗೂ ಭಂಗ ತರುತ್ತಾನೆ. ಆದ್ದರಿಂದ ವ್ಯಕ್ತಿಯು ಮದ್ಯಪಾನದಂತಹ ದುಶ್ಚಟಕ್ಕೆ ಬಲಿಬೀಳದೆ ಸನ್ಮಾರ್ಗದಲ್ಲಿ ನೆಮ್ಮದಿಯ ಬಾಳುವೆ ಮಾಡುವುದು ಪರಮ ಪವಿತ್ರ ಕರ್ತವ್ಯವಾಗಿದೆ.

*ಪ್ರಶ್ನೆಗಳು :*

ಅ) ಮದ್ಯಪಾನವು ದೇಹದ ಮೇಲೆ ಬೀರುವ ಪರಿಣಾಮವನ್ನು ತಿಳಿಸಿ.

ಆ) ತಜ್ಞರ ಪರೀಕ್ಷೆಗಳಿಂದ ದೃಢಪಡಿಸುವ ಅಂಶ ಯಾವುದು ?

***ಉತ್ತರ :***

ಅ) ಮದ್ಯಪಾನವು ಜಠರದಲ್ಲಿ ಕೆರಳಿಕೆಯನ್ನುಂಟು ಮಾಡುವುದು. ಪಿತ್ತಕೋಶ, ಮೂತ್ರ ಪಿಂಡಗಳಲ್ಲಿ ವಿನಾಶಕಾರಕ ಪ್ರತಿಕ್ರಿಯೆಯನ್ನುಂಟು ಮಾಡುವುದು. ನರಗಳ ದೌರ್ಬಲ್ಯವನ್ನುಂಟುಮಾಡಿ ಕರ್ತವ್ಯ ದಕ್ಷತೆಯನ್ನು ನಾಶಪಡಿಸಿ, ಸಿಡುಕುತನ, ಮುಂಗೋಪ, ದುರ್ಬುದ್ಧಿಯನ್ನು ಅಧಿಕಗೊಳಿಸುವುದು.

ಆ) ಮದ್ಯವು ಇತರ ಆಹಾರಗಳಂತೆ ನಮ್ಮ ಶರೀರಕ್ಕೆ ಶಕ್ತಿಯನ್ನು ನೀಡುವಂತ ಗುಣವಿಶೇಷವನ್ನು ಹೊಂದಿಲ. ಅದು ದೇಹಕ್ಕೆ ಹಾನಿಕಾರಕ ಪ್ರತಿಕ್ರಿಯೆಯನ್ನುಂಟು ಮಾಡುವ ಗುಣಗಳಿಂದ ಕೂಡಿರುವುದೆಂದು ತಜ್ಞರ ಪರೀಕ್ಷೆಗಳಿಂದ ದೃಢಪಟ್ಟಿದೆ.

## ವಿಭಾಗ – 'ಬಿ'

### (ಅನ್ವಯಿಕ ವ್ಯಾಕರಣ, ಅಲಂಕಾರ, ಛಂದಸ್ಸು)

**ಬಹು–ಆಯ್ಕೆ ಪ್ರಶ್ನೆ (ಕ್ರಮಾಕ್ಷರದೊಂದಿಗಿನ ಪ್ರತಿ ಸರಿಯುತ್ತರಕ್ಕೆ 1 ಅಂಕ) :** $10 \times 1 = 10$

46. 'ತುತ್ತತುದಿ' ಪದವು ಈ ವ್ಯಾಕರಣಾಂಶಕ್ಕೆ ಉದಾಹರಣೆಯಾಗಿದೆ

(ಎ) ಜೋಡುನುಡಿ (ಬಿ) ದ್ವಿರುಕ್ತಿ

(ಸಿ) ಕ್ರಿಯಾರ್ಥಕಾವ್ಯಯ (ಡಿ) ಕ್ರಿಯಾಪದ

***ಉತ್ತರ :*** (ಬಿ) ದ್ವಿರುಕ್ತಿ

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| 47. | ಪಾರಿಭಾಷಿಕ ಪದಗಳನ್ನು ಬಳಸುವಾಗ, ಅನ್ಯಭಾಷೆಯ ಪದಗಳನ್ನು ಬಳಸುವಾಗ ಬರುವ ಲೇಖನ ಚಿಹ್ನೆ<br>(ಎ) ಉದ್ಧರಣ ಚಿಹ್ನೆ (ಬಿ) ಅರ್ಧವಿರಾಮ ಚಿಹ್ನೆ<br>(ಸಿ) ಆವರಣ ಚಿಹ್ನೆ (ಡಿ) ವಾಕ್ಯವೇಷ್ಠನ ಚಿಹ್ನೆ<br>***ಉತ್ತರ :*** (ಡಿ) ವಾಕ್ಯವೇಷ್ಠನ ಚಿಹ್ನೆ | |
| 48. | 'ಷಣ್ಮುಖ' ಪದವು ಈ ಸಂಧಿಗೆ ಉದಾಹರಣೆಯಾಗಿದೆ<br>(ಎ) ವೃದ್ಧಿ ಸಂಧಿ (ಬಿ) ಜಶ್ತ್ವ ಸಂಧಿ<br>(ಸಿ) ಅನುನಾಸಿಕ ಸಂಧಿ (ಡಿ) ಆದೇಶ ಸಂಧಿ<br>***ಉತ್ತರ :*** (ಸಿ) ಅನುನಾಸಿಕ ಸಂಧಿ | |
| 49. | 'ಮೂಗಾವುದ' ಪದವು ಈ ಸಮಾಸಕ್ಕೆ ಉದಾಹರಣೆಯಾಗಿದೆ<br>(ಎ) ಕ್ರಿಯಾ ಸಮಾಸ (ಬಿ) ಬಹುವ್ರೀಹಿ ಸಮಾಸ<br>(ಸಿ) ದ್ವಿಗು ಸಮಾಸ (ಡಿ) ಗಮಕ ಸಮಾಸ<br>***ಉತ್ತರ :*** (ಸಿ) ದ್ವಿಗು ಸಮಾಸ | |
| 50. | ಬೀದರಿನಲ್ಲಿ ಕಾಲರಾ ವ್ಯಾಪಕವಾಗಿ ಹಬ್ಬಿತ್ತು. – ವಾಕ್ಯವು<br>(ಎ) ಸಂಯೋಜಿತ ವಾಕ್ಯ (ಬಿ) ಸಾಮಾನ್ಯ ವಾಕ್ಯ<br>(ಸಿ) ಮಿಶ್ರ ವಾಕ್ಯ (ಡಿ) ಪ್ರಶ್ನಾರ್ಥಕ ವಾಕ್ಯ<br>***ಉತ್ತರ :*** (ಬಿ) ಸಾಮಾನ್ಯ ವಾಕ್ಯ | |
| 51. | ಕೃದಂತಭಾವನಾಮಕ್ಕೆ ಉದಾಹರಣೆಯಾದ ಪದವಿದು<br>(ಎ) ತಿನ್ನುವಿಕೆ (ಬಿ) ತಿನ್ನುವ<br>(ಸಿ) ತಿಂದ (ಡಿ) ತಿನ್ನಲು<br>***ಉತ್ತರ :*** (ಎ) ತಿನ್ನುವಿಕೆ | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| 52. | ಪಂಚಮೀ ವಿಭಕ್ತಿಯ ಪ್ರತ್ಯಯವಿದು<br>(ಎ) ಇಂ (ಬಿ) ಅಂ<br>(ಸಿ) ಒಳ್ (ಡಿ) ಅತ್ತಣಿಂ<br>***ಉತ್ತರ :*** (ಡಿ) ಅತ್ತಣಿಂ | |
| 53. | ಕ್ರಿಯಾಪದದ ಮೂಲರೂಪ<br>(ಎ) ಪ್ರಾತಿಪದಿಕ (ಬಿ) ಧಾತು<br>(ಸಿ) ಸರ್ವನಾಮ (ಡಿ) ಪ್ರತ್ಯಯ<br>***ಉತ್ತರ :*** (ಬಿ) ಧಾತು | |
| 54. | 'ದೇಶ' ಪದವು ನಾಮಪದದ ಈ ಗುಂಪಿಗೆ ಸೇರುತ್ತದೆ<br>(ಎ) ರೂಢನಾಮ (ಬಿ) ಅಂಕಿತನಾಮ<br>(ಸಿ) ಅನ್ವರ್ಥನಾಮ (ಡಿ) ಆತ್ಮಾರ್ಥಕ ಸರ್ವನಾಮ<br>***ಉತ್ತರ :*** (ಎ) ರೂಢನಾಮ | |
| 55. | ಸಾಮಾನ್ಯಾವ್ಯಯಕ್ಕೆ ಉದಾಹರಣೆಯಾದ ಪದವಿದು<br>(ಎ) ಧಗಧಗ (ಬಿ) ಸಾಕು<br>(ಸಿ) ಸೊಗಸಾಗಿ (ಡಿ) ಅಥವಾ<br>***ಉತ್ತರ*** (ಸಿ) ಸೊಗಸಾಗಿ | |
| | **ಸಂಬಂಧೀಪದ ಬರೆಯುವುದು (ಪ್ರತೀ ಸರಿಯುತ್ತರಕ್ಕೆ 1 ಅಂಕ) :** | 4 × 1 = 4 |
| 56. | ಕಾವ್ಯ : ಕಬ್ಬ :: ವ್ಯಾಪಾರಿ : ......................... .<br>***ಉತ್ತರ :*** ಬೇಹಾರಿ | |
| 57. | ತಂಬಾಕು : ಪೋರ್ಚ್‌ಗೀಸ್ :: ರುಜು : ......................... .<br>***ಉತ್ತರ :*** ಉರ್ದು | |
| 58. | ಮೇದಿನಿ : ಭೂಮಿ :: ಲಲನೆ : ......................... .<br>***ಉತ್ತರ :*** ತರುಣಿ | |
| 59. | ಮಾಡುತ್ತ : ಕೃದಂತಾವ್ಯಯ :: ಕನ್ನಡಿಗ : ......................... .<br>***ಉತ್ತರ :*** ತದ್ಧಿತಾಂತನಾಮ | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| 60. | **ಪ್ರಸ್ತಾರ ಹಾಕಿ, ಗಣ ವಿಭಾಗಿಸಿ, ಛಂದಸ್ಸನ್ನು ಹೆಸರಿಸುವುದು :** | 1 × 3 = 3 |
| | ಪ್ರಸ್ತಾರ ಹಾಕುವುದು | 1 ಅಂಕ |
| | ಗಣ ವಿಭಾಗಿಸುವುದು | 1 ಅಂಕ |
| | ಛಂದಸ್ಸಿನ ಹೆಸರು ಬರೆಯುವುದು | 1 ಅಂಕ |
| | ಒಟ್ಟು | 3 ಅಂಕಗಳು |

ಮರುಳು ಮಾಧವ ಮಹಿಯ ರಾಜ್ಯದ

ಸಿರಿಗೆ ಸೋಲುವನಲ್ಲ ಕೌಂತೇ

ಯರು ಸುಯೋಧನರೆನಗೆ ಬೆಸಕೈವಲ್ಲಿ ಮನವಿಲ್ಲ

***ಅಥವಾ***

ಉರ್ವಿಯೊಳ್ ಕೌಸಲ್ಯೆ ಪಡೆದ ಕುವರಂ ರಾಮ

ನೊರ್ವನೇ ವೀರನಾತನ ಯಜ್ಞತುರಗಮಿದು

ನಿರ್ವಹಿಸಲಾರ್ಪರಾರಾದೊಡಂ ತಡೆಯಲೆಂದಿರ್ದ ಲೇಖನವನೋದಿ

***ಉತ್ತರ :***

| ೩ | ೪ | ೩ | ೪ | |
|---|---|---|---|---|
| U U U | — U U | U U U | — U U | |
| ಮರುಳು | ಮಾಧವ | ಮಹಿಯ | ರಾಜ್ಯದ | = ೧೪ |

| ೩ | ೪ | ೩ | ೪ | |
|---|---|---|---|---|
| U U U | — U U | — U | — — | |
| ಸಿರಿಗೆ | ಸೋಲುವ | ನಲ್ಲ | ಕೌಂತೇ | = ೧೪ |

| ೩ | ೪ | ೩ | ೪ | ೩ | ೪ | ೨ | |
|---|---|---|---|---|---|---|---|
| U U U | — U U | U U U | U U — | — U | U U — | — | |
| ಯರುಸು | ಯೋಧನ | ರೆನಗೆ | ಬೆಸಕೈ | ವಲ್ಲಿ | ಮನವಿ | ಲ್ಲ | = ೨೩ |

ಇದು ಮಾತ್ರಾಗಣ ಛಂದಸ್ಸಿನ 'ಭಾಮಿನಿ' ಷಟ್ಪದಿಯಲ್ಲಿ ರಚಿತವಾಗಿದೆ.

***ಅಥವಾ***

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|

ಉರ್ವಿಯೊಳ್ | ಕೌಸಲ್ಯೆ | ಪಡೆದ ಕುವ | ರಂ ರಾಮ | = ೨೦

ನೊರ್ವನೇ | ವೀರನಾ | ತನ ಯಜ್ಞ | ತುರಗಮಿದು | = ೨೦

ನಿರ್ವಹಿಸ | ಲಾರ್ಪರಾ | ರಾದೊಡಂ | ತಡೆಯಲೆಂ | ದಿರ್ದ ಲೇ | ಖನವನೋ | ದಿ ॥ = ೩೨

ಇದು ಮಾತ್ರಾಗಣ ಛಂದಸ್ಸಿನ 'ವಾರ್ಧಕ ಷಟ್ಪದಿ'ಯಲ್ಲಿ ರಚಿತವಾಗಿದೆ.

61. **ಅಲಂಕಾರವನ್ನು ಹೆಸರಿಸಿ, ಲಕ್ಷಣ ಬರೆದು, ಸಮನ್ವಯ ಮಾಡುವುದು :** 1 × 3 = 3

| | |
|---|---|
| ಅಲಂಕಾರವನ್ನು ಹೆಸರಿಸುವುದು | 1 ಅಂಕ |
| ಲಕ್ಷಣ ಬರೆಯುವುದು | 1 ಅಂಕ |
| ಅಂಶಗಳನ್ನು ಗುರುತಿಸಿ, ಸಮನ್ವಯಿಸುವುದು | 1 ಅಂಕ |
| ಒಟ್ಟು | 3 ಅಂಕಗಳು |

"ನೀಚರಿಗೆ ಮಾಡಿದ ಉಪಕಾರವು ಹಾವಿಗೆ ಹಾಲೆರೆದಂತೆ"

***ಅಥವಾ***

"ಮಾರಿಗೌತಣವಾಯ್ತು ನಾಳಿನ ಭಾರತವು"

***ಉತ್ತರ :***

*ಅಲಂಕಾರದ ಹೆಸರು* : ಉಪಮಾಲಂಕಾರ

*ಲಕ್ಷಣ* : ಎರಡು ವಸ್ತುಗಳಿಗೆ ಇರುವ ಪರಸ್ಪರ ಹೋಲಿಕೆಯನ್ನು ಹೇಳುವುದೇ 'ಉಪಮಾಲಂಕಾರ'.

*ಸಮನ್ವಯ :* *ಉಪಮೇಯ* : ನೀಚರಿಗೆ ಮಾಡಿದ ಉಪಕಾರ

*ಉಪಮಾನ* : ಹಾವಿಗೆ ಎರೆದ ಹಾಲು

*ಉಪಮಾ ವಾಚಕ :* ಅಂತೆ

*ಸಮಾನಧರ್ಮ :* ಲುಪ್ತವಾಗಿದೆ (ಅಪ್ರಯೋಜಕ)

ಇಲ್ಲಿ ನೀಚರಿಗೆ ಮಾಡಿದ ಉಪಕಾರ ಎಂಬ ಉಪಮೇಯವನ್ನು ಹಾವಿಗೆ ಎರೆದ ಹಾಲು ಎಂಬ ಉಪಮಾನಕ್ಕೆ ಅಂತೆ ಎಂಬ ಉಪಮಾವಾಚಕದ ಮೂಲಕ ಲುಪ್ತವಾಗಿರುವ (ಅಪ್ರಯೋಜಕ) ಸಮಾನಧರ್ಮವನ್ನು ಹೇಳಿ, ಪರಸ್ಪರ ಹೋಲಿಸಿ ವರ್ಣಿಸಿರುವುದರಿಂದ ಇದು ಧರ್ಮಲುಪ್ತೋಪಮಾಲಂಕಾರದ ಲಕ್ಷ್ಯವಾಗಿದೆ.

***ಅಥವಾ***

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| | *ಅಲಂಕಾರದ ಹೆಸರು* : ರೂಪಕಾಲಂಕಾರ<br>*ಲಕ್ಷಣ* : ಉಪಮೇಯ ಉಪಮಾನಗಳಲ್ಲಿ ಅಭೇದವನ್ನು ಹೇಳಿ ವರ್ಣಿಸುವ ಅಲಂಕಾರ 'ರೂಪಕಾಲಂಕಾರ'.<br>*ಸಮನ್ವಯ* : *ಉಪಮೇಯ* : ನಾಳಿನ ಭಾರತ ಯುದ್ಧ<br>*ಉಪಮಾನ* : ಮಾರಿಗೆ ನೀಡುವ ಔತಣ<br>ಇಲ್ಲಿ ನಾಳಿನ ಭಾರತ ಯುದ್ಧ ಎಂಬ ಉಪಮೇಯವನ್ನು ಮಾರಿಗೆ ನೀಡುವ ಔತಣ ಎಂಬ ಉಪಮಾನಕ್ಕೆ ಪರಸ್ಪರ ಅಭೇದ ಕಲ್ಪಿಸಿ ಒಂದೇ ಎಂದು ವರ್ಣಿಸಿರುವುದರಿಂದ ಇದು ರೂಪಕಾಲಂಕಾರದ ಲಕ್ಷ್ಯವಾಗಿದೆ. | |
| | **ವಿಭಾಗ – 'ಸಿ'**<br>**(ವಾಕ್ಯರಚನೆ ಹಾಗೂ ಬರೆವಣಿಗೆ ಕೌಶಲ)** | |
| 62. | **ಗಾದೆಯನ್ನು ವಿಸ್ತರಿಸಿ ಬರೆಯುವುದು :**<br>* ದೇಶ ಸುತ್ತು; ಕೋಶ ಓದು<br>* ಮಾಡಿದ್ದುಣ್ಣೋ ಮಹರಾಯ<br>* ಮಾತೇ ಮುತ್ತು; ಮಾತೇ ಮೃತ್ಯು<br>***ಉತ್ತರ :*** | 1 × 3 = 3 |
| | ಗಾದೆಯ ಮಹತ್ವದ ವಿವರಣೆ | 1 ಅಂಕ |
| | ಉದಾಹರಣೆಯೊಂದಿಗೆ ಅರ್ಥ ವಿವರಣೆ | 1 ಅಂಕ |
| | ಭಾಷಾಶೈಲಿಗೆ–ಪದಬಂಧಗಳಿಗೆ | 1 ಅಂಕ |
| | ಒಟ್ಟು | 3 ಅಂಕಗಳು |
| 63. | **ಪತ್ರ ಲೇಖನ ಬರೆಯುವುದು :**<br>ನಿಮ್ಮನ್ನು ಹಾವೇರಿಯ ಕನಕದಾಸ ಪ್ರೌಢಶಾಲೆಯ 'ವೇದಶ್ರೀ' ಎಂದು ಭಾವಿಸಿಕೊಂಡು ನಿಮ್ಮ ಶಾಲೆಯಲ್ಲಿ ಆಚರಿಸಿದ 'ಗ್ರಂಥಾಲಯ ದಿನಾಚರಣೆ' ಕಾರ್ಯಕ್ರಮದ ವರದಿಯನ್ನು ಪ್ರಕಟಿಸುವಂತೆ ಕೋರಿ 'ಹೊಸ ದಿಗಂತ' ದಿನಪತ್ರಿಕೆಯ ಸಂಪಾದಕರಿಗೆ ಒಂದು ಮನವಿ ಪತ್ರ ಬರೆಯಿರಿ.<br>***ಅಥವಾ***<br>ನಿಮ್ಮನ್ನು ಹುಬ್ಬಳಿಯ ವಿವೇಕಾನಂದ ಪ್ರೌಢಶಾಲೆಯ 'ಉತ್ಸವ' ಎಂದು ಭಾವಿಸಿಕೊಂಡು ಹತ್ತನೇ ತರಗತಿ ವಾರ್ಷಿಕ ಪರೀಕ್ಷೆಯ ಪೂರ್ವತಯಾರಿಯನ್ನು ವಿವರಿಸಿ ಗದಗನ ಪಂಚಾಕ್ಷರಿಗವಾಯಿ ಪ್ರೌಢಶಾಲೆಯಲ್ಲಿ ವ್ಯಾಸಂಗ ಮಾಡುತ್ತಿರುವ ಗೆಳೆಯ 'ಉಲ್ಲಾಸ'ನಿಗೆ ಒಂದು ಪತ್ರ ಬರೆಯಿರಿ. | 1 × 5 = 5 |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| | ***ಉತ್ತರ :*** | |
| | *ವ್ಯಾವಹಾರಿಕ / ಮನವಿ ಪತ್ರ :* | |
| | ಇಂದ, ಗೆ, ಸಂಬೋಧನೆ, ವಿಷಯ | 1 ಅಂಕ |
| | ಪತ್ರದ ಒಡಲು, ವಿಷಯ ನಿರೂಪಣೆ | 2 ಅಂಕಗಳು |
| | ವಂದನೆಯೊಂದಿಗೆ ಮುಕ್ತಾಯ, ಇಂತಿ, ಸ್ಥಳ, ದಿನಾಂಕ | 1 ಅಂಕ |
| | ಭಾಷಾಶೈಲಿಗೆ, ಪದಬಳಕೆ, ವಿನ್ಯಾಸ | 1 ಅಂಕ |
| | ಒಟ್ಟು | 5 ಅಂಕಗಳು |
| | **ಅಥವಾ** | |
| | *ಖಾಸಗಿ / ಗೆಳೆಯರಿಗೆ ಪತ್ರ :* | |
| | ಇಂದ ವಿಳಾಸ, ದಿನಾಂಕ, ಸಂಬೋಧನೆ, ಕ್ಷೇಮ ವಿಚಾರ | 1 ಅಂಕ |
| | ಪತ್ರದ ಒಡಲು, ವಿಷಯ ನಿರೂಪಣೆ | 2 ಅಂಕಗಳು |
| | ಮುಕ್ತಾಯ, ಇಂತಿ, ಸಂಬೋಧನೆ, ಸಹಿ, ಹೊರ ವಿಳಾಸ | 1 ಅಂಕ |
| | ಭಾಷಾಶೈಲಿಗೆ, ಪದ ಬಳಕೆ, ವಿನ್ಯಾಸ | 1 ಅಂಕ |
| | ಒಟ್ಟು | 5 ಅಂಕಗಳು |
| 64. | **ಪ್ರಬಂಧ ಬರೆವಣಿಗೆ :** | $1 \times 5 = 5$ |
| | ✳ ಅತಿವೃಷ್ಟಿಯಿಂದಾಗುವ ಅನಾಹುತಗಳು | |
| | ✳ ನನ್ನ ಮೆಚ್ಚಿನ ಪುಸ್ತಕ | |
| | ✳ ನಿರುದ್ಯೋಗ ಸಮಸ್ಯೆ | |
| | ***ಉತ್ತರ :*** | |
| | ಪ್ರಸ್ತಾವನೆ / ಪೀಠಿಕೆ / ವಿಷಯ ಪ್ರವೇಶ | 1 ಅಂಕ |
| | ಒಡಲು–ಸಮರ್ಥ ವಿವರಣಯೊಂದಿಗೆ ವಿಷಯಕ್ಕೆ | 2 ಅಂಕಗಳು |
| | ಉಪಸಂಹಾರ / ಮುಕ್ತಾಯ / ವಿಷಯ ಸಮಾಪ್ತಿ | 1 ಅಂಕ |
| | ಭಾಷಾಶೈಲಿಗೆ, ಪದಬಂಧಕ್ಕೆ | 1 ಅಂಕ |
| | ಒಟ್ಟು | 5 ಅಂಕಗಳು |